28TH YEAR OF PUBLICATION. PHONE 728 ಬೆಲೆ: ಎರಡಾಣೆ.

# ಪ್ರಭಾತ

ಸಂಪುಟ: ೨೮. ಸಂಚಿಕೆ: ೩. 25—2—1962 Vol. XXVIII. No. 3.



PRABHAT ✻ KANNADA WEEKLY ✻ MANGALORE

ವಿದುರನನ್ನು ಕರೆದು ಧೃತರಾಷ್ಟ್ರನು ದ್ಯೂತಕ್ಕಾಗಿ ಯುಧಿಷ್ಠಿರನನ್ನು ಹಸ್ತಿನಾವತಿಗೆ ಕರತರುವಂತೆ ಆಜ್ಞಾಪಿಸಿದನು. ಈ ಅನ್ಯಾಯಪೂರ್ಣವಾದ ಆದೇಶವನ್ನು ಕೇಳಿ ವಿದ್ವಾಂಸರಲ್ಲಿ ಸರ್ವಶ್ರೇಷ್ಠನಾದ ವಿದುರನು ಕಡುನೊಂದನು. "ಮಹಾರಾಜ, ಈ ಆದೇಶವು ಕುರುಕುಲಕ್ಕೆ ಕುಠಾರದಂತಿದೆ" ಎಂದು ಅವನು ವಿಜ್ಞಾಪಿಸಿಕೊಂಡನು.

"ವಿದುರ, ದೈವವು ನಮಗೆ ಪ್ರತಿಕೂಲವಾಗಿರದಿದ್ದರೆ, ನಾವೆಂತು ಕಲಹವನ್ನು ಒಡ್ಡಲು ಸಾಧ್ಯವು? ಜಗತ್ತೇ ವಿಧಾತನ ಅಧೀನವಾಗಿರುವಾಗ ನಾವು ಏನು ಮಾಡಲು ಸ್ವತಂತ್ರರಾಗಿರುವೆವು? ಆದ್ದರಿಂದ ವಿದುರ! ನೀನು ಕುಂತೀಪುತ್ರನಾದ ಯುಧಿಷ್ಠಿರನನ್ನು ಶೀಘ್ರವಾಗಿ ಕರತರಬೇಕು" ಎಂದು ಆಜ್ಞಾಪಿಸಿದನು

ವಿದುರನು ರಾಜಾಜ್ಞೆಯನ್ನು ಶಿರಸಾವಹಿಸಿ ವೇಗವಾದ ರಥವೇರಿ ಇಂದ್ರಪ್ರಸ್ಥವನ್ನು ಸೇರಿದನು. ಕುಬೇರನ ಭವನಕ್ಕೆ ಸಮಾನವಾದ ರಾಜಗೃಹವನ್ನು ಪ್ರವೇಶಿಸಿ ಯುಧಿಷ್ಠಿರನನ್ನು ಸಂದರ್ಶಿಸಿದನು. ಅಜಾತಶತ್ರು ಧರ್ಮರಾಯನು ಯೋಗ್ಯ ಆದರ-ಸತ್ಕಾರಗಳಿಂದ ವಿದುರನನ್ನು ಸನ್ಮಾನಿಸಿ ಧೃತರಾಷ್ಟ್ರಾದಿ ಪ್ರಭೃತಿಗಳ ಕುಶಲವನ್ನು ವಿಚಾರಿಸಿದನು.

"ರಾಜನ್, ಇಂದ್ರನಿಗೆ ಸಮಾನನಾದ ರಾಜ ಧೃತರಾಷ್ಟ್ರನೂ ಅವನ ಶತಪುತ್ರರೂ ಕುಶಲವೆ. ಕೃಪಾಚಾರ್ಯರೂ, ದ್ರೋಣಾಚಾರ್ಯರೂ, ದ್ರೋಣಪುತ್ರ ಅಶ್ವತ್ಥಾಮ ಮೊದಲಾದ ಆಚಾರ್ಯರೆಲ್ಲರೂ ಸುಖಸಂತೋಷದಿಂದಿರುವರು. ಅವರೆಲ್ಲರೂ ನಿಮ್ಮ ಕ್ಷೇಮಸಮಾಚಾರವನ್ನು ಕೇಳಿದ್ದಾರೆ.

"ನಿಮ್ಮ ರಾಜಸೂಯ ಮಹಾಧ್ವರಕ್ಕೆ ಬಂದಾಗ ನಿಮ್ಮ ವೈಭವದ ರತ್ನಖಚಿತ ಸಭಾಭವನವನ್ನು ನೋಡಿ, ದುರ್ಯೋಧನನು ಮಾತ್ಸರ್ಯಗೊಂಡವನಾಗಿ ತಂದೆಯನ್ನು ಬಲವಂತಪಡಿಸಿದನು. ಆದ್ದರಿಂದ

ಲೇಖಾಂಕ ೪೪.

# ಮಹಾಭಾರತ ಕಥಾಮೃತ

(ಲೇಖಕ: ಶ್ರೀ| ಕೊ.ಶ.ಕಾರಂತ, ಬಿ.ಎ.,ಬಿ.ಎಲ್., ಎಡ್ವೊಕೇಟ್, ಮಂಗಳೂರು.)

## ದ್ಯೂತಕ್ಕಾಗಿ ಹಸ್ತಿನಾವತಿಗೆ

ನಿಮ್ಮ ಸಭಾಭವನಕ್ಕೆ ಸಮಾನವಾದ ಒಂದು ಸಭಾಮಂದಿರವನ್ನು ನಿರ್ಮಿಸಿದ್ದಾರೆ. ನೀವು ನಿಮ್ಮ ಸಹೋದರರೊಡಗೂಡಿ ಈ ಸಭಾಮಂದಿರವನ್ನು ನೋಡಬೇಕಾಗಿ ಧೃತರಾಷ್ಟ್ರನು ಆಹ್ವಾನಮಾಡಿದ್ದಾನೆ. ಅದರಲ್ಲಿ ಇಷ್ಟಮಿತ್ರರೆಲ್ಲರು ಸೇರಿ ನೀವು ದ್ಯೂತಕ್ರೀಡೆಯನ್ನಾಡುವುದನ್ನು ನೋಡಬೇಕೆಂಬ ತನ್ನ ಬಯಕೆಯನ್ನು ನಿಮಗೆ ತಿಳುಹಿಸಲು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ. ನೀವೆಲ್ಲರೂ ಸೇರಿ ದ್ಯೂತಕ್ರೀಡೆಯನ್ನಾಡಬೇಕಂತೆ" ಎಂದು ರಾಜನ ಆದೇಶವನ್ನು ನಿರೂಪಿಸಿದನು.

ಈ ಮಾತನ್ನು ಕೇಳಿ ಧರ್ಮರಾಯನು ಹೀಗೆಂದನು: "ವಿದುರ ಮಹಾತ್ಮಾ ದ್ಯೂತದ ಪ್ರಸಾದವೇ ಕಲಹ. ನೀತಿವಿದರು ದ್ಯೂತವನ್ನು ಪ್ರಶಂಸಿಸುವುದಿಲ್ಲ. ನಾವೆಲ್ಲರೂ ನಿಮ್ಮ ಆಜ್ಞಾನುಸಾರ ಹಸ್ತಿನಾವತಿಗೆ ಪ್ರಯಾಣಮಾಡಲು ಈ ಕ್ಷಣವೇ ಸಿದ್ಧರೇ. ಆದರೆ, ಅದನ್ನು ಸಮರ್ಥಿಸುವಿರಾ?"

"ದ್ಯೂತವು ಅನರ್ಥಕಾರಿ ಎಂದು ನಾವು ಖಂಡಿತ ಮನಗೊಂಡಿದ್ದೇವೆ. ಅದನ್ನು ತಡೆಯಬೇಕೆಂದು ಬಹಳ ಪ್ರಯತ್ನವನ್ನು ಮಾಡಿದ್ದೆವು. ಆದರೂ ಧೃತರಾಷ್ಟ್ರನು ನಿಮ್ಮನ್ನು ಕರತರಲೇಬೇಕೆಂದು ಆಜ್ಞಾಪಿಸಿರುವನು. ನಿಮಗೆ ಶುಭವಾಗಿರುವುದನ್ನು, ಯೋಚಿಸಿ ಮಾಡಿರಿ. ನಮ್ಮ ಶಂಖವನ್ನು ಊದಬಿಟ್ಟಿದ್ದೇವೆ."

"ಬುದ್ಧಿವಂತ ವಿದುರಾ, ರಾಜ ಧೃತರಾಷ್ಟ್ರನ ಆಜ್ಞೆಯಂತೆ ನಾನು ಅವಶ್ಯ ದ್ಯೂತಕ್ರೀಡೆಯನ್ನು ಆಡುವೆನು. ನೀವು ಕೊಟ್ಟ ಆದೇಶಕ್ಕೆ ಬದ್ಧನಾಗಿ ನಾವೆಲ್ಲರೂ ಹಸ್ತಿನಾಪುರಕ್ಕೆ ನಿಮ್ಮೊಡನೆ ಪ್ರಸ್ಥಾನಗೆಯ್ಯುವೆವು. ಈಗ ರಸವತ್ತಾದ ಭೋಜನವನ್ನು ಪರಿಗ್ರಹಿಸಿ ಸ್ವಲ್ಪ ವಿಶ್ರಮಿಸಿ ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳಿರಿ" ಎಂದು ಯುಧಿಷ್ಠಿರನು ರಸುದೂಟಕ್ಕೆ, ವಿದುರನನ್ನು ಕರಕೊಂಡು ಅಂತಃಪ್ರದೇಶವನ್ನು ಪ್ರವೇಶಿಸಿದನು.

ಇತ್ತ ಹಸ್ತಿನಾಪುರದ ದ್ಯೂತಕ್ರೀಡಾರಂಭಕ್ಕೆ ರಥಾದಿಗಳು ಸಿದ್ಧಪಡಿಸಲ್ಪಟ್ಟವು. ವಿಪ್ರಶ್ರೇಷ್ಠರು ಸ್ವಸ್ತಿವಾಚನವನ್ನು ಮಾಡಿದ ಮೇಲೆ ಪುರೋಹಿತ ಧೌಮ್ಯರೊಡನೆ ರಾಜಭವನದಿಂದ ಪಾಂಡವರು ಪ್ರಸ್ಥಾನಗೈದರು. ಸೂತ, ಮಾಗಧ ಮತ್ತು ವಂದಿಜನರು ಸ್ತುತಿಪಾಠ ಮಾಡಿದರು. ವಿಶಾಲವಾದ ಸುಸಜ್ಜಿತ ಸೈನ್ಯದಿಂದ ಆವೃತನಾದ ಯುಧಿಷ್ಠಿರನು ಸೂರ್ಯದೇವನಂತೆ ಶೋಭಿಸುತ್ತಿದ್ದನು. ಪ್ರಜಾಜನರು ಮಾರ್ಗದ ಉಭಯಪಾರ್ಶ್ವದಲ್ಲಿಯೂ ನಿಂತು ಮಹಾರಾಜನಿಗೆ ಜಯ ಜಯ ಎಂದು ಉದ್ಘೋಷಿಸುತ್ತಿದ್ದರು.

ಅತ್ಯುನ್ನತವಾದ ಆನೆಯನ್ನೇರಿ ಬಲವಂತ ಭೀಮಸೇನನು ಯುಧಿಷ್ಠಿರನನ್ನು ಅನುಸರಿಸಿದನು. ಅವನ ಎಡಬಲಗಡೆಗಳಲ್ಲಿ ಅಶ್ವಾರೂಢರಾದ ನಕುಲ ಮತ್ತು ಸಹದೇವರು ವಿರಾಜಿಸುತ್ತಿದ್ದರು. ಶಸ್ತ್ರಧಾರಿಯಾದ ಶ್ವೇತವಾಹನನಾದ ಅರ್ಜುನನು ಅಗ್ನಿದೇವನಂತೆ ರಥವೇರಿ ಮಹಾರಾಜ ಧರ್ಮರಾಯನ ಹಿಂಭಾಗದಲ್ಲಿಯೇ ಇದ್ದು ವಿರಾಜಿಸುತ್ತಿದ್ದನು. ದ್ರೌಪದಿಯು ದಾಸಿ ಜನರೊಡನೆ ರಥದಲ್ಲಿ ಪೂರ್ಣಮಿ ಚಂದ್ರನಂತೆ ಪ್ರಕಾಶಿಸುತ್ತಿದ್ದಳು.

ಈ ಪ್ರಕಾರವಾದ ಪಾಂಡವರ ಸೇನೆಯಲ್ಲಿ ಶಂಖ, ದುಂದುಭಿ, ವೇಣುವೀಣಾದಿಗಳ ವಾದ್ಯಗಳ ಘೋಷವು ತ್ರಿಲೋಕವನ್ನು ಭೇದಿಸುವಂತೆ ಮೊಳಗಿತು. ಯೋಜನ ಯೋಜನವನ್ನು ಸಾಗುತ್ತ ಈ ಪಾರ ಸೈನ್ಯವು ಹಸ್ತಿನಾವತಿಯನ್ನು ಪ್ರವೇಶಿಸಿತು.

ವಿದುರನು ಮುಂದಗಾಮಿನಿಯಾಗಿ ಹೋಗಿ ಪಾಂಡವರ ಆಗಮನವಾರ್ತೆಯನ್ನು ಧೃತರಾಷ್ಟ್ರ ರಾಜನಿಗೆ ಅರುಹಿದನು. ಸಂಭ್ರಮದ ಸ್ವಾಗತವು ಅವರಿಗೆ ನೀಡಲ್ಪಟ್ಟಿತು. ಯುಧಿಷ್ಠಿರನು ಸಹೋದರರೊಡಗೂಡಿ ಧೃತರಾಷ್ಟ್ರ ಭೂಪತಿಯ ಭವನವನ್ನು ಪ್ರವೇಶಿಸಿ ಸಾಷ್ಟಾಂಗ ಪ್ರಣಾಮಗೈದನು. ಅನಂತರ ಅವನು ಭೀಷ್ಮ, ದ್ರೋಣ, ಕೃಪಾಚಾರ್ಯ ಅಶ್ವತ್ಥಾಮರನ್ನು ಸಂದರ್ಶಿಸಿದನು. ಆಮೇಲೆ, ಸೋಮದತ್ತ, ದುರ್ಯೋಧನ, ಶಲ್ಯ, ಶಕುನಿ ಆದಿ ಎಲ್ಲವರನ್ನು ಕಂಡು ಕುಶಲವನ್ನು ವಿಚಾರಿಸಿದನು. ಅನಂತರ ಮಹಾರಾಜ ಧೃತರಾಷ್ಟ್ರನನ್ನು ಪುನಃ ಸಂದರ್ಶಿಸಿದನು. ಅಪ್ಪಣೆಯನ್ನು ಪಡೆದು ಪಾಂಡವರು ರತ್ನಮಯಗೃಹವನ್ನು ಪ್ರವೇಶಿಸಿ ವಿಶ್ರಮಿಸಿದರು.

ಇತ್ತ ದುರ್ಯೋಧನನು, ಪಾಂಡವರು ತನ್ನ ಬಲೆಗೆ ಬಿದ್ದರೆಂದು ಆನಂದಸಾಗರದಲ್ಲಿ ಮುಳುಕಿದನು. ನಿತ್ಯಕರ್ಮವನ್ನು ತೀರಿಸಿ ಮನೋಜ್ಞ ಭೋಜನವನ್ನು ಸ್ವೀಕರಿಸಿ, ಅವರು ಶಯನಗೃಹವನ್ನು ಪ್ರವೇಶಿಸಿದರು. ಸುಖಪೂರ್ವಕ ರಾತ್ರೆಯು ಕಳೆಯಿತು. ಅರುಣೋದಯವಾಗುತ್ತಲೆ ವಂದಿಮಾಗಧರು ಸ್ತುತಿಪಾಠಕ್ಕೆ ಆರಂಭಿಸಿರು. ಸ್ನಾನಸಂಧ್ಯೋಪಾಸನಾದಿ ನಿತ್ಯಕರ್ಮಗಳನ್ನು ವಿಧಿವತ್ತಾಗಿ ಮಾಡಿ ದ್ಯೂತಕ್ರೀಡೆಗಾಗಿ ರಮಣೀಯ ಸಭಾಭವನವನ್ನು ಪಾಂಡವರು ಪ್ರವೇಶಿಸಿದರು.

——

### ಶರಾಬು ಪತ್ತೆ

ಮಂಗಳೂರು ಕಸ್ಟಮ್ಸ್ ಡಿಪ್ಯೂಟಿ ಸುಪರಿಂಟೆಂಡೆಂಟ್ ಶ್ರೀ| ಮೋಹನ ಕೃಷ್ಣ ಮತ್ತು ಸಿಬಂದಿಯವರು ಕಳೆದ ಒಂದು ವಾರದಲ್ಲಿ ಸುಲ್ತಾನ್ ಬತ್ತೇರಿಯ ಎದುರು ಬೆಂಗ್ರೆಯಲ್ಲಿ ಹೊಯಿಗೆಯಲ್ಲಿ ಹೂತಿಟ್ಟಿದ್ದ ಸುಮಾರು 825 ಬಾಟ್ಲಿಯಷ್ಟು ಗೋವಾ ಶರಾಬು ಪತ್ತೆ ಹಚ್ಚಿರುವರಾಗಿ ತಿಳಿಯಲಾಗಿದೆ.

——

ಹಿಂತಿರುಗುತ್ತಿದ್ದ ನಂದಿನಿಯವರನ್ನು ನಾವು ವಿಚಾರಿಸಿದೆವು. ಹಾಗಾಗಿ ನಮಗೆ ಗೊತ್ತು."

ನಂದನು ಒಡನೇ ಮೇಲ್‌ಬಂಗಾಡಿ ಗುತ್ತಿಗೆ ಧಾವಿಸಿದನು. ಮನೆಯ ಚಾವಡಿ ಹತ್ತಿದನು. ಗಟ್ಟಿಸಿ ಕರೆದನು:

"ನಂದಿನೀ! ನಂದಿನೀ!"

ನಿರುತ್ತರ! ಒಳಗೆ ಪ್ರವೇಶಿಸಿದನು. ಬೆಳಕಿನ ಕೊಠಡಿಗೆ ದಿಟ್ಟಿಸಿ ಕತ್ತಲೆಯ ಕೊಠಡಿಗೆ ಕಾಲನ್ನಿಕ್ಕಿ ಸರಿದನು.

"ನಂದಿನೀ! ನಂದಿನೀ!"

ಪುನಃ ಉತ್ತರವಿಲ್ಲ. ಮುಂದೆ ಸರಿಯುವಾಗ ಅವನ ಬಲದಕಾಲಿನ ಉಂಗುಷ್ಠ, ನೆಲದ ಮೇಲೆ ಬಿದ್ದುಕೊಂಡು ಕಣ್ಣೀರಿಕ್ಕುತ್ತಿರುವ ನಂದಿನಿಯ ತಲೆ ತುದಿಗೆ ಎಡವಿತು.

"ಏನು, ನಂದಿನೀ? ನಾನು ದಂಡಿಗೆ ಹೋಗಿ "ಸಮಂ" (ಮರಣ) ಹೊಂದಲಿಲ್ಲವೆಂದು ನೀನು ದುಃಖಿಸುತ್ತಿರುವುದೇ?"

ದೀಪ ಹೊತ್ತಿಸಿ ಅವಳ ಮುಖದ ಕಡೆಗೆ ನಿಟ್ಟಿಸಿದನು.

"ನಂದಿನೀ, ನಮ್ಮ ಈ ವರೆಗಿನ ನಡೆವಳಿಕೆ—ನಾನು ಒಳಗೆ ಹೋಗುವಾಗ ನೀನು ಹೊರಗೆ ಬರುತ್ತಿದ್ದಿ, ನಾನು ಹೊರಗೆ ಹೋಗುವಾಗ ನೀನು ಒಳಗೆ ಸರಿಯುತ್ತಿದ್ದಿ—ನಿನ್ನ ಮುಖವನ್ನು ನಾನು ಕಣ್ಣೆತ್ತಿ ಅಪೂರ್ವವಾಗಿ ಇದೇ ಈಗ ನೋಡುತ್ತಿದ್ದೇನೆ!"

ನಂದಿನಿಯ ಮೂಗಿನಲ್ಲಿ ನತ್ತು ಮತ್ತು ಕೊರಳಲ್ಲಿ ಕರಿಮಣಿಗಳು ಶೂನ್ಯವಾಗಿರುವುದನ್ನು ಕಂಡುಕೊಂಡು ನಂದನು ಮತ್ತೆ ಗುರುಗುರುಸಿದನು:

"ನಾನು ಯುದ್ಧದಲ್ಲಿ ಮಡಿದೆನೆಂದು ಕೊಂಡು ಮೊದಲೇ ಮೂಗುತಿ ಕರೀಮಣಿಗಳನ್ನು ಕಿತ್ತುಕೊಂಡಿದ್ದಿಯಾ?"

ತನ್ನ ಪತಿಯ ಆಗಮನದ ಆನಂದವನ್ನು ಹೊರಗೆ ಪ್ರದರ್ಶಿಸಿಕೊಳ್ಳುವಷ್ಟಕ್ಕೆ ನಂದಿನಿಗೆ ನೈತಿಕ ವ್ಯವಧಾನ ಇಲ್ಲವಾಯಿತು. ಮೂಗುತಿ, ಕರೀಮಣಿಗಳು ಸ್ತ್ರೀಯ ಮುತ್ತೈದೆತನದ ಮಂಗಲಕರ ಸಂಕೇತವು! ಸುಮಂಗಲಿಯೊಬ್ಬಳು ವಿವೇಚನಾಶೂನ್ಯಳಾಗಿ ಅವುಗಳನ್ನು ಕಳಚಿಕೊಂಡಳೆಂದರೆ, ಅವಳು ಅಷ್ಟು ಕಠಿಣಮನಸ್ಕಳೆಂದು ವಿದಿತ. ಪತಿಯ ಮೇಲಿನ ಪ್ರೇಮೋದ್ವೇಗ ಅರ್ಥಾತ್ ಅತೀ ಮೈತ್ರಿಯು ನಂದಿನಿಯನ್ನು ಅಂಥ ಶ್ರದ್ಧೆಗೆ ಸೆಳೆಯಿತು. ವಿವೇಕ ಭ್ರಷ್ಟಳಾಗಿ ನಂದಿನಿ ಅಸಂಗತವನ್ನೆಸಗಿದ್ದಳು. ಪತಿಯ ಮುಂದೆ ನಂದಿನಿ ಅಪರಾಧಿನಿ! ಅವಳು ಮತ್ತೆ ಪತಿಯ ಮುಖವನ್ನು ತಲೆ ಎತ್ತಿ ನಿರುಕಿಸುವಳೆಂತು? ಆದರೆ, ಪತಿಯು ಕೊನೆಗೆ ಈಗತಾನೇ ಮಾಡಿದ ಆರೋಪವು, ನಂದಿನಿಯ ಹೃದಯಾಂತರಾಳದ ವಿಶಿಷ್ಟತೆಯೊಂದನ್ನು ಕೆರಳಿಸುವಂತಿತ್ತು. ನಂದಿನಿ ತಡೆಯದಾದಳು. ಅಶ್ರುಪೂರಿತನೇತ್ರೆಯಾಗಿ ಆಕೆ ಈ ರೀತಿಯಾಗಿ ಪತಿಗೆ ನಿವೇದಿಸಿಕೊಂಡಳು:

"ಮುದುಮಗ! ಕಲೆ ಇಲ್ಲದ ಮೈಗೆ ಕಲೆಹಾಕಬೇಡಿ. ನೀವು ಕಾಳಗದ ಕಣಕ್ಕೆ ಬೆನ್ನು ತಿರುಗಿಸಿ ಹೋದಕೂಡಲೇ ನಾನು ಗುಡ್ಡದ ಪುರಾಣಿಕರ ಬಳಿಗೆ ಧಾವಿಸಿದೆನು. ಅವರಲ್ಲಿ ನೋಟನಿಮಿತ್ತದಲ್ಲಿ ಕೇಳಿದೆನು. ನಿಮ್ಮ ತಲೆತುದಿ ಮಾಸಿದ ಅವಧಿಯಿಂದ ಶುರುಹಚ್ಚಿದ ನಾನು ಈ ದಿನದ ವರೆಗೂ ನೋಟನಿಮಿತ್ತದಲ್ಲಿ ಕೇಳುತ್ತಲೇ ಬಂದೆನು."

ಅಷ್ಟು ಕೇಳಿದ ನಂದನು ಚಾವಡಿಗೆ ಬಂದನು. ಅವನನ್ನನುಸರಿಸಿ ನಂದಿನಿಯೂ ಬಂದಳು. ನಂದನು ಮನೆಯ ಮುಂದಿರುವ ಹಟ್ಟಿಯನ್ನು ಈಕ್ಷಿಸುತ್ತ ಕುತೂಹಲಾಶ್ಚರ್ಯದಿಂದ ಕೇಳಿದನು:

"ನಮ್ಮ ಹಟ್ಟಿಯೊಳಗಿದ್ದ ದನಕರುಗಳು ಏನಾದವು?"

"ಹಟ್ಟಿಯೊಳಗಿದ್ದ ದನಕರುಗಳು ಗುಡ್ಡದ ಪುರಾಣಿಕರ ಮನೆಯಲ್ಲಿವೆ. ಮನೆಯಲ್ಲಿ ಹಣದ ತಟ್ಟೆಯಾಗಿಕೊಂಡುದರಿಂದ ದನಕರುಗಳನ್ನು ಅವರಿಗೆ ಕೊಟ್ಟೆನು. ಮತ್ತೆ ಅದು ಕೂಡ ಸಾಕಾಗದೆ ಹೋದಾಗ ಮೈಯಲ್ಲಿದ್ದ ಚಿನ್ನಾಭರಣಗಳನ್ನು ತೆಗೆದೆನು. ಮೈಯ ಚಿನ್ನಾಭರಣಗಳನ್ನು ಕೊಟ್ಟು ಬರಿದು ಮಾಡಿದ ಮೇಲೆ, ಮನೆಯ ಪಾತ್ರೆ ಭಾಜನಗಳನ್ನು ಕೊಂಡುಹೋದೆನು. ಎಲ್ಲಾ ಕೊಟ್ಟು ಮುಗಿದ ಮೇಲೆ ಮೂಗಿನ ಮೂಗುತಿಯನ್ನು ಕಾಣಿಕೆ ಇಟ್ಟು ನಿಮಿತ್ಯ ಕೇಳಿದೆನು. ಮೂಗುತಿ ಇಟ್ಟ ಘಳಿಗೆಯಲ್ಲಿ ಪುರಾಣಿಕರು—'ನಿನ್ನ ಗಂಡನು ಕಾಳಗದಲ್ಲಿ ಜಯಶಾಲಿಯಾಗಿ ಮರಳುವ ಕಾಲದಲ್ಲಿ ನೀನು ಮೂಗುತಿ ಕಳಚಿಬಿಟ್ಟೆ. ಈ ವಿಷಮ ಘಳಿಗೆಯಲ್ಲಿ ನಿನ್ನ ಪತಿಯು ದಾರಿಯಲ್ಲಿ ಕುಹಕಿಗಳಿಂದ ಕೊಲ್ಲಲ್ಪಟ್ಟನು' ಎಂಬ ಭಯಾನಕ ನಿಮಿತ್ಯ ಪ್ರಕಟಿಸಿದರು. ಅಷ್ಟು ಕೇಳಿದ ನಾನು ಖಿನ್ನಳಾಗಿ ಮನೆ ಸೇರಿದೆನು. ನನ್ನ ಪಾಡಿಗೆ ನೆಲದಲ್ಲಿ ಅಂಗತ್ರನೇ ಬಿದ್ದು ವಿಲಪಿಸುತ್ತಲಿದ್ದೆನು. ಅಷ್ಟರಲ್ಲಿ ನನ್ನ ಆರಾಧ್ಯದೇವರ ದರ್ಶನವಾಯಿತು."

"ಸ್ತ್ರೀ ಬುದ್ಧಿ ಮೊಣಕಾಲ ಕೆಳಗೆ. ಸ್ತ್ರೀ ಬುದ್ಧಿ ಚಂಚಲ, ಪ್ರಳಯಾಂತಕವೂ ಸಹಜ. ಮುಗ್ಧ ಹೆಣ್ಣೇ! ನಿನ್ನ ಅವಿವೇಕವನ್ನೇನೆನ್ನಲಿ? ನಡಿ! ಬಟ್ಟೆ ಉಟ್ಟುಕೋ. ಪುರಾಣಿಕರ ಮನೆಗೆ ಹೋಗೋಣ."

"ನಾನು ಹೇಗೆ ಬರಲಿ? ನನ್ನ ಮೂಗಿನಲ್ಲಿ ಮೂಗುತಿ ಇಲ್ಲ, ಕೊರಳಲ್ಲಿ ಕರೀಮಣಿ ಇಲ್ಲ. ಯಾರಾದರೂ ನನ್ನನ್ನು ನೋಡಿ ಅಪಹಾಸ್ಯಗೈಯ್ಯಲಿಕ್ಕಿಲ್ಲವೇ?"

"ನೀನು ಪುರಾಣಿಕರ ಮನೆಯಿಂದ ಹೇಗೆ ಬಂದೆ? ಹಾಗೇ ನನ್ನ ಜತೆಯಲ್ಲಿ ಹೊರಟು ಬಾ."

ಇಬ್ಬರೂ ಪುರಾಣಿಕರ ಗುಡ್ಡದ ಮನೆಗೆ ನಡೆದರು.

ದಂಪತಿಗಳಿಬ್ಬರೂ ಪುರಾಣಿಕರ ಮನೆಯನ್ನು ಹೊಕ್ಕಾಗ, ಪುರಾಣಿಕರು ಮಧ್ಯಾಹ್ನದ ಮಹಾಪೂಜೆಗೆ ಮಿಂದು, ಮೈಯೊರಸಿಕೊಳ್ಳುತಿದ್ದರು. ಪುರಾಣಿಕರು ದಡದಡನೇ ಮುಂದೆ ಬಂದು ನಂದನನ್ನುದ್ದೇಶಿಸಿ ಈ ರೀತಿ ಸ್ವಾಗತಿಸಿದರು:

"ಹೋ! ದಂಡನಾಯಕರಾದ ನಂದರು! ಬನ್ನಿ! ಕೂತುಕೊಳ್ಳಿರಿ."

ಸತಿಪತಿಯರನ್ನು ಉಚಿತಾಸನಗಳಲ್ಲಿ ಕೂತುಕೊಳ್ಳಿಸಿ ಮತ್ತೆ ಪುರಾಣಿಕರು ಹೀಗೆ ನುಡಿದರು:

"ನಂದನವರೇ! ನೀವು ಯಾತಕ್ಕಾಗಿ ಬಂದಿರೆನ್ನುವ ಅಂಶ ನನಗೆ ಮನವರಿಕೆಯಾಗಿದೆ. ನೀವು ಮಾತನಾಡುವುದಕ್ಕೆ ಮುಂದಾಗಿ ನಾನು ನಿಮಗೆ ಅರಿಕೆಮಾಡಿಕೊಳ್ಳುವಂತಹ ವಿಷಯವಿರುತ್ತದೆ. ಆ ಮೇಲೆ ತಾವು ಧಾರಾಳ ಮಾತನಾಡುವಿರಂತೆ."

"ಏನು ನಿಮ್ಮ ವಿಷಯ? ಹೇಳಿರಿ, ಪುರಾಣಿಕರೇ."

ಪುರಾಣಿಕರು ಆಖ್ಯಾನಿಸಿದರು:

"ನೀವು ಕಾಳಗಕ್ಕೆ ಹೊರಟುಹೋದ ದಿವಸ ಬೆಳಿಗ್ಗೆ ಎರಡು ಬೆಳ್ಳಿಯ ನಾಣ್ಯಗಳನ್ನು ಹಿಡಿದುಕೊಂಡು ನಂದಿನಿ ಪ್ರಶ್ನೆ ಕೇಳುವುದಕ್ಕೆ ಇಲ್ಲಿಗೆ ಬಂದಳು. ನನ್ನನ್ನು—ಉಣ್ಣುವವನನ್ನು—ಉಣ್ಣುವುದಕ್ಕೆ ಬಿಡಲೊಲ್ಲಳು. ಉಂಡ ಹುಮ್ಮಸಕ್ಕೆ ವೀಳ್ಯಹಾಕಲಿಕ್ಕೆ ವೇಳೆಕೊಡಳು. ಕೊನೆಯ ನಿಮಿತ್ಯದಲ್ಲಿ ನೀವು ವಿಜೇತರಾಗಿ ಯುದ್ಧದಿಂದ ಮರಳುವಾಗ ಕೊಲ್ಲಲ್ಪಟ್ಟರೆಂದು ನಾನು ಹೇಳಿದ್ದು ಖರೆ. ಪ್ರಶ್ನೆ ಕೇಳುವುದಕ್ಕಾಗಿ ತನ್ನ ಕರೀಮಣಿ, ಮೂಗುತಿ ಕಳಚಿಡುವಷ್ಟು ಮುಗ್ಧತನದ ಸ್ತ್ರೀಗೆ ಮತ್ತೆ ಹೇಗೆ ನಾನು ಬುದ್ಧಿ ಕಲಿಸಬೇಕು? ನೀವು ಕೊಲ್ಲಲ್ಪಟ್ಟರೆಂದರೆ ಮತ್ತೇನಲ್ಲ; ಅವಳ ಪಾಲಿಗೆ ಅವಳು ನಿಮ್ಮನ್ನು ಅಳಿಸಿಕೊಂಡಳೆಂಬ ತಾತ್ಪರ್ಯವಷ್ಟೆ. ನಂದರೇ, ನಿಮ್ಮ ಮನೆಯ ದನಕರು, ಪಾತ್ರೆಭಾಜನ, ಚಿನ್ನಾಭರಣ, ದುಡ್ಡುದುಗ್ಗಾಣಿಗಳನ್ನೆಲ್ಲ ಕಾಯ್ದಿಟ್ಟಿದ್ದೇನೆ. ಇವನ್ನೆಲ್ಲಾ ಚಂದದಿಂದಲೇ ನೀವು ಹೋಗುವಾಗ ಒಯ್ದುಕೊಂಡು ಹೋಗಿರಿ."

ನಂದನು ಮತ್ತೆ ಪ್ರತಿಯಾಗಿ ಪುರಾಣಿಕರಿಗೆ ಏನನ್ನೂ ಮಾತನಾಡಲಿಲ್ಲ. ಪುರಾಣಿಕರು ಚಾವಡಿಯ ಮಧ್ಯದಲ್ಲಿ ಎಲ್ಲಾ ಒಡವೆಗಳನ್ನು ತಂದಿರಿಸಿದರು.

ನಂದನು ಕರೀಮಣಿ ಮತ್ತು ಮೂಗುತಿಗಳನ್ನು ನಂದಿನಿಯಿಂದ ಎತ್ತಿ ತೆಗಿಸಿ, ಅವುಗಳನ್ನು ಪುನಃ ಅವಳ ಕೈಯಿಂದಲೇ ಅವಳಿಗೆ ತೊಡಿಸಿದನು. ಒಡವೆಸಾಮಗ್ರಿಗಳನ್ನೆಲ್ಲ ನಂದಿನಿಯ ತಲೆಯ ಮೇಲೆ ಹೊರಿಸಿ ಅವಳಿಂದಲೇ ತನ್ನ ಮೇಲ್ ಬಂಗಾಡಿ ಗುತ್ತಿನ ಮನೆಗೆ ಸಾಗಿಸಿದನು ಮತ್ತು ದನಕರುಗಳನ್ನು ಅಟ್ಟಿಸಿದನು.

ನಂದನು ಆ ಮೇಲೆ ತನ್ನ ಮಾವ ಸುರಪರನ್ನು ಕಾಣುವುದಕ್ಕೆ ಅವರ ಸುರಲಡಿ ಬೀಡಿಗೆ ತೆರಳಿದನು. ಮನೆಗೆ ಬಂದ ತನ್ನ ಅಳಿಯನನ್ನು ಸುರಪರು ಅತ್ಯಂತ ಪ್ರೀತ್ಯಾದರದಿಂದ ಅಪ್ಪಿಕೊಂಡರು. ತನ್ನ ಅಳಿಯನು ದಂಡನಾಯಕನಾಗಿ ಹೋಗಿ ಸಮರವಿಜೇತನಾಗಿ ಹಿಂತಿರುಗಿದ ಪ್ರಸಂಗವು ಅಪಹಾಸ್ಯಗೈದಂತಹ ಊರಿನ ಯುವಜನರಿಗೆ ಛೀಮಾರಿ ಹಾಕಿ ಅವರ ಮುಖಭಂಗವನ್ನು ಮಾಡಿತ್ತು.

ತೂಗುಯ್ಯಾಲೆಯಲ್ಲಿ ನಂದನನ್ನು ಜತೆಯಲ್ಲಿ ಕೂತುಕೊಳ್ಳಿಸಿ, ಅವನ ಧೀರೋದಾತ್ತ ಸಮರಸೈ ಪುಣ್ಯದ ಪ್ರಶಂಸೆಯನ್ನು ಮಾಡುತ್ತಿದ್ದ ಮಾವನವರಿಗೆ ನಂದನು, ತಟ್ಟನೇ ಎದ್ದು ನಿಂತುಕೊಂಡು ಹೀಗೆ ನುಡಿದನು:

"ಮಾವನವರೇ, ನನ್ನ ಬಗ್ಗೆ ನಿಮ್ಮ ಸ್ತುತಿವಾದನೆಯನ್ನು ಸಾಕುಮಾಡಿರಿ. ನನ್ನ ಸಮರವಿಜಯಕ್ಕಿಂತಲೂ ಸ್ವಾರಸ್ಯವಾದ ನನ್ನ ಮನೆಯ ಅವಾಂತರದ ಕತೆಯನ್ನು ನೀವು ಅರಿಯದೇ ಹೋದಿರಿ. ಯುದ್ಧದಲ್ಲಿ ನಾನು ಸತ್ತು ನಿಮ್ಮ ಮಗಳು—ನನ್ನ ಸತಿ—ನಂದಿನಿ ವಿಧವೆಯಾಗಿ ಮನೆಯ ಮುಟ್ಟುಗೋಲಾದ ಘಟನಾವಳಿಯನ್ನು ನಿಮಗೆ ನಾನು ವರದಿಮಾಡಿಕೊಂಡು ಹೋಗಲು ಬಂದೆನು." ಹೀಗೆಂದು ನುಡಿದು ನಂದಿನಿಯ ತಿಳಿಗೇಡಿತನದ ಕಥನವನ್ನು ಮಾವನಿಗೆ ನಂದನು ನಿರೂಪಿಸಿದನು.

ತರುವಾಯ ಅಲ್ಲಿ ಮತ್ತೆ ಅರೆಕ್ಷಣವೂ ನಿಲ್ಲದೆ ಮೇಲ್‌ಬಂಗಾಡಿ ಗುತ್ತಿನ ತನ್ನ ನಿವಾಸಕ್ಕೆ ಸಾಗಿದನು.

ಚಾವಡಿಯಲ್ಲಿ ಅವನಿಗೆ ನಂದಿನಿಯ ಮಂದಸ್ಮಿತ ಸುಂದರ ಮುಖಾರವಿಂದದ ದರ್ಶನವಾಯಿತು. ನಂದಿನಿ ಇದೀಗ ಅಜ್ಞಾನ ಕಳೆದ ನವನೂತನ ಸೌಭಾಗ್ಯವತಿಯಾಗಿದ್ದಳು. ಚಿಕ್ಕ ಮೇಘದಲ್ಲಿ ಸುಧಾಕರನ ಶುಭ್ರಕಾಂತಿಯು ಸಮಾಚ್ಛನ್ನವಾಗುವಂತೆ ನಂದನ ಅಶಾಂತಿ ತುಂಬಿದ ಹೃದಯದಲ್ಲಿ ಸ್ಫೂರ್ತಿಯು ಆಕ್ರಮಿಸಿತೊಂಡಿತು. ಲಜ್ಜಾನ್ವಿತಳಾಗಿ ನಿಂತುಕೊಂಡ ತನ್ನ ಮನೋಹಾರಿಣಿಯ ಸುಕೋಮಲ ದೇಹವನ್ನು ಬರಸೆಳೆದು ಆಲಿಂಗಿಸಿದನು. ಹೃದಯಶುದ್ಧತೆಯ ಮಧ್ಯದಲ್ಲಿ ಮುಗ್ಧತನದ ಲೋಪದೋಷಗಳು ಕ್ಷಣಕಾಲ ಬಾಧಿಸಿದಾಗ್ಯೂ ನೈಜಸ್ಥಿತಿಯನ್ನು ಬಟ್ಟಗಲಾರದು.

—ಎಂ. ನಾರಾಯಣ,
ಮಂಗಳೂರು.

— —

[5ನೇ ಪುಟದಿಂದ ಮುಂದುವರಿದುದು]

ಮೇಲಿನ ಎಂಟು ಕ್ಷೇತ್ರಗಳಿಗೆ ಸಂಬಂಧಿಸಿದ ದಕ್ಷಿಣ ವಲಯದ ಲೋಕಸಭಾ ಸ್ಥಾನದ ಫಲಿತಾಂಶ ಮಾತ್ರ ಯಾರ ನಿರೀಕ್ಷೆಗೂ ನಿಲುಕದ ವಿಷಯವಾಗಿ ಬಿಟ್ಟಿದೆ. ಹೆಚ್ಚಿನವರಾಡಿಕೊಳ್ಳುವಂತೆ ಸ್ವತಂತ್ರ ಪಕ್ಷದ ಹುರಿಯಾಳು ಶ್ರೀ| ಜೆ. ಎಂ. ಲೋಬೋ ಪ್ರಭುಗಳೇ ಆ ಸ್ಥಾನಕ್ಕೆ ಅರಿಸಿಬರಬಹುದೆಂದಿದ್ದರೂ, ಕೊಂಗ್ರೆಸ್ ಅಭ್ಯರ್ಥಿ ಶ್ರೀ| ಎ. ಶಂಕರ ಆಳ್ವರಿಗೂ ಸಮಬಲದಲ್ಲಿ ಮತಗಳು ಬಿದ್ದಲ್ಲಿ ಕಮ್ಯೂನಿಸ್ಟ್ ಅಭ್ಯರ್ಥಿ ಶ್ರೀ| ಬಿ. ವಿ. ಕಕ್ಕಿಲ್ಲಾಯರಿಗೆ ಆ ಸ್ಥಾನ ಹೋಗಬಾರದೆಂದಿಲ್ಲ. ಈ ಸ್ಥಾನಕ್ಕೂ ಚತುಷ್ಕೋನ ಸ್ಪರ್ಧೆಯಿರುವುದರಿಂದ ಒಂದೆರಡು ಸಾವಿರ ಮತಗಳ ಅಂತರದಿಂದ ಕೊಂಗ್ರೆಸ್ಸೇ ಈ ಬಾರಿಯೂ ಆ ಸ್ಥಾನ ಗೆಲ್ಲುವ ಸಾಧ್ಯತೆಯೂ ತಪ್ಪಿದ್ದಲ್ಲ.

ಈ ಎರಡೂ ವಲಯಗಳ ವಿಧಾನ ಸಭಾ ಕ್ಷೇತ್ರಗಳ ಮತಗಳೆಣಿಕೆ ತಾ. 26 ರಂದು ಆರಂಭವಾಗಿ ತಾ. 23ರೊಳಗೆ ಫಲಿತಾಂಶಗಳು ಬಯಲಾಗುವವು. ಲೋಕಸಭಾ ಸ್ಥಾನಗಳ ಮತಗಳೆಣಿಕೆ ಮಾರ್ಚ್ ತಾ.2 ರಂದು ನಡೆಯುವುದು.

## ಮತದಾನದ ಸಂಪೂರ್ಣ ವಿವರಗಳು

ದಕ್ಷಿಣ ಕನ್ನಡ ಜಿಲ್ಲೆಯ 16 ಕ್ಷೇತ್ರಗಳಲ್ಲಿ ಮತದಾನವಾದ ನಿರ್ದಿಷ್ಟ ವಿವರಗಳು ಇದೀಗ ನಮ್ಮ ಕೈಸೇರಿದ್ದು ಅವುಗಳನ್ನು ಈ ಕೆಳಗೆ ಪ್ರಕಟಿಸವಾಗಿದೆ.

**ಉಡುಪಿ ಲೋಕಸಭಾ ವಲಯ:**

| ಕ್ಷೇತ್ರ | ಜುಮ್ಲಾ ಮತಗಳ ಸಂಖ್ಯೆ | ಪೋಲಾದ ಓಟುಗಳು | ಹೆಂಗಸರು | ಗಂಡಸರು | ಶೇಕಡಾ ಅಂಶ |
|---|---|---|---|---|---|
| ಸುರತ್ಕಲ್ | 53,325 | 28,403 | 14,951 | 13,452 | 53·2 |
| ಮೂಡಬಿದ್ರೆ | 48,770 | 21,807 | 9,272 | 12,535 | 44·7 |
| ಕಾಪು | 50,273 | 29,601 | 16,284 | 13,317 | 58·8 |
| ಕಾರ್ಕಳ | 46,627 | 29,967 | 15,335 | 14,632 | 64·3 |
| ಉಡುಪಿ | 46,753 | 33,826 | 17,945 | 15,881 | 72·3 |
| ಬ್ರಹ್ಮಾವರ | 50,941 | 29,254 | 14,656 | 14,598 | 57·4 |
| ಕುಂದಾಪುರ | 56,215 | 33,159 | 17,580 | 15,579 | 59·0 |
| ಬೈಂದೂರು | 76,285 | 35,306 | 18,880 | 16,426 | 50·0 |
| ಜುಮ್ಲಾ | 4,23,089 | 2,41,323 | 1,24,903 | 1,16,420 | 57·0 |

**ಮಂಗಳೂರು ಲೋಕಸಭಾ ವಲಯ:**

| ಕ್ಷೇತ್ರ | ಜುಮ್ಲಾ ಮತಗಳ ಸಂಖ್ಯೆ | ಪೋಲಾದ ಓಟುಗಳು | ಹೆಂಗಸರು | ಗಂಡಸರು | ಶೇಕಡಾ ಅಂಶ |
|---|---|---|---|---|---|
| ಮಂಗಳೂರು I | 51,473 | 40,994 | 20,969 | 20,025 | 79·7 |
| ಮಂಗಳೂರು II | 57,299 | 43,222 | 21,948 | 21,274 | 75·4 |
| ಪಾಣೆಮಂಗಳೂರು | 57,427 | 35,271 | 15,998 | 19,273 | 61·4 |
| ಪುತ್ತೂರು | 55,664 | 30,830 | 11,934 | 18,896 | 55·4 |
| ಬೆಳ್ತಂಗಡಿ | 59,594 | 35,863 | 15,750 | 20,113 | 60·2 |
| ಸುಳ್ಯ | 51,121 | 27,249 | 9,622 | 17,627 | 53·3 |
| ಮಡಿಕೇರಿ | 62,369 | 43,122 | 25,058 | 18,064 | 69·2 |
| ವಿರಾಜಪೇಟೆ | 53,376 | 31,880 | 18,734 | 13,146 | 59·7 |
| ಜುಮ್ಲಾ | 4,48,323 | 2,88,441 | 1,40,013 | 1,48,418 | 64·3 |

ಮಂಗಳೂರು ಒಂದನೇ ಮತದಾರ ಕ್ಷೇತ್ರವು ಮತದಾನದಲ್ಲಿ ನಮ್ಮ ಜಿಲ್ಲೆಯ ಮಟ್ಟಿಗೆ ದಾಖಲೆ ಸ್ಥಾಪಿಸಿದೆ.

ನಗರದಲ್ಲಿ, ಹಲವು ಮತಗಟ್ಟೆಗಳಲ್ಲಿ, ಮಧ್ಯಾಹ್ನ ಘಂಟೆ 1ರ ತನಕ ಮತದಾನವು ಮೆಲ್ಲನೆ ನಡೆದಿತ್ತು; ಕೆಲವೊಂದು ಮತಗಟ್ಟೆಗಳಲ್ಲಿ ಒಂದು ಗಂಟೆ ತನಕ 400ರಷ್ಟು ಮತಗಳು ಮಾತ್ರ ಬಿದ್ದುದನ್ನು ಕಂಡಾಗ ಈ ಬಾರಿಯ ಮತದಾನವು ಬಲು ಕಡಿಮೆಯೆಂದೇ ಹೇಳುವಂತಾಯಿತು. ಏಕೆಂದರೆ, ಪ್ರತೀಬಾರಿ, ಅತಿ ಹೆಚ್ಚು ಮತಗಳು ಪೂರ್ವಾಹ್ನವೇ ದಾಖಲಾಗುತ್ತಿದ್ದುದು ಈ ವರೆಗಿನ ಅನುಭವವಾಗಿತ್ತು. ಆದರೆ, ಮಧ್ಯಾಹ್ನ 1ರ ನಂತರ ಒಂದೇ ಸವನೆ, ಪ್ರತಿಯೊಂದು ಮತಗಟ್ಟೆಯಲ್ಲೆಂಬಂತೆ ಮತದಾರರು ಬರತೊಡಗಿದರು. ಮತದಾನವು ಬಿರುಸಿನಿಂದ ನಡೆಯಿತು. ಮಣ್ಣಗುಡ್ಡೆ, ಪಾಂಡೇಶ್ವರ, ಕಂಕನಾಡಿ, ಹ್ಯೊಗ್ಗೆ ಬಜಾರ ಮೊದಲಾದ ಕಡೆಗಳಲ್ಲಿ ಅಧಿಕಾಧಿಕ ಮತಗಳು ಬಿದ್ದುವು.

ಎಲ್ಲಿಯೂ ಶಾಂತಿಭಂಗವಾಗುವಂಥ ಉದ್ರೇಕವಿರಲಿಲ್ಲ. ಮತದಾರರು ತಮ್ಮ ಕರ್ತವ್ಯವನ್ನರಿತು, ಗುಂಪುಗುಂಪಾಗಿ ಉತ್ಸಾಹದಿಂದ ಬಂದು ಮತವಿತ್ತರು.

1957ರಲ್ಲಾದ ಮತದಾನಕ್ಕಿಂತ ಈ ಬಾರಿಯ ಮತದಾನವು ನಮ್ಮ ಜಿಲ್ಲೆಯ ಮಟ್ಟಿಗೆ, ಜನರಲ್ಲಿನ ರಾಜಕೀಯ ಜಾಗೃತಿಯನ್ನು ಚೆನ್ನಾಗಿ ಮಾಡಿತೋರಿಸಿದೆ

ಪ್ರತಿಯೊಂದು ಪಕ್ಷದವರೂ ತಮ್ಮ ಪ್ರಚಾರವನ್ನು ಅವಿರತವಾಗಿ ನಡೆಸಿದ್ದರು.

ಜಿಲ್ಲೆಯ ಉತ್ತರಮೂಲೆಯಾದ ಬೈಂದೂರಿನಲ್ಲಿ, ಕಳೆದಬಾರಿ ಅವಿರೋಧವಾಗಿ ಆರಿಸಿಬಂದಿದ್ದ ಶ್ರೀ| ಯಡ್ತರೆ ಮಂಜಯ್ಯ ಶೆಟ್ಟಿ (ಕೊಂಗ್ರೆಸ್) ಇವರನ್ನು ಈ ಬಾರಿ ಇಬ್ಬರು ಪ್ರತಿಸ್ಪರ್ಧಿಗಳು ಎದುರಿಸಿದ್ದರು. ಕುಂದಾಪುರದಲ್ಲಿ, 1957ರಲ್ಲಿ, ಕೊಂಗ್ರೆಸ್ ಹುರಿಯಾಳು ಶ್ರೀ| ಸೂರ್ಯನಾರಾಯಣ ಅಡಿಗರನ್ನು ಮೇಲೆ ಕೇವಲ 427 ಮತಗಳ ಹೆಚ್ಚಳದಿಂದ ಗೆದ್ದ ಶ್ರೀ| ವಿ. ಶ್ರೀನಿವಾಸ ಸೆಟ್ಟಿ (ಪಿ. ಎಸ್. ಪಿ.) ಅವರು ಈ ಬಾರಿ ಶ್ರೀ| ಎಸ್. ಎಸ್. ಕೊಳ್ಕೆಬೈಲ್ (ಕೊಂಗ್ರೆಸ್) ಮತ್ತು ಶ್ರೀ| ಸೂರ್ಯನಾರಾಯಣ ಹಂದೆ (ಪಕ್ಷರಹಿತ ಸ್ವತಂತ್ರ) ಇವರನ್ನೆದುರಿಸಿದ್ದರು; ಕಳೆದಬಾರಿ ನೇರಾದ ಸ್ಪರ್ಧೆಯಿದ್ದಲ್ಲಿ ಈ ಬಾರಿ ತ್ರಿಕೋಣ ಸ್ಪರ್ಧೆಯಿದ್ದು, ಒಟ್ಟಿಗೆ 33,159 ಮತಗಳು ಬಿದ್ದವೆ.

ಬ್ರಹ್ಮಾವರದಲ್ಲಿ, ಸುರತ್ಕಲ್ಲಿನಲ್ಲಿ, ಕಾರ್ಕಳದಲ್ಲಿ, ಮಂಗಳೂರು ಎರಡು ಕ್ಷೇತ್ರಗಳಲ್ಲಿ, ಬೆಳ್ತಂಗಡಿಯಲ್ಲಿ, ಪಾಣೆಮಂಗಳೂರಲ್ಲಿ—ಪ್ರತಿಯೊಂದು ಕಡೆಯಲ್ಲಿ—ತೀವ್ರ ಸ್ಪರ್ಧೆಯಿತ್ತು.

ಮಂಗಳೂರು I ಕ್ಷೇತ್ರದಲ್ಲಿ, ಕಳೆದ ಬಾರಿಯಂತೇ, ಈ ಬಾರಿಯೂ ಬಿರುಸಿನ ಸ್ಪರ್ಧೆಯಿತ್ತು. 1957ರಲ್ಲಿದ್ದಷ್ಟೇ ಹುರಿಯಾಳುಗಳು ಈ ಬಾರಿಯೂ ಇದ್ದರು. ಕಳೆದಬಾರಿ ಪಕ್ಷರಹಿತ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶ್ರೀಮತಿ ಲೋರಾಪಾಯ್ಸರು ಈ ಬಾರಿ ಸ್ವತಂತ್ರಪಕ್ಷದ ಅಭ್ಯರ್ಥಿಯಾಗಿ ಬಲವಾದ ಸ್ಪರ್ಧೆಕೊಟ್ಟಿದ್ದರು. ಶ್ರೀ| ಎ. ಶಾಂತಾರಾಮ ಪೈಗಳವರು (ಕಮ್ಯು) ಕಳೆದಬಾರಿ ಇದೇ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದು, ಈ ಬಾರಿಯೂ ಸ್ಪರ್ಧಿಸಿದ್ದರು. ಜನಸಂಘದ ಪರವಾಗಿ ಶ್ರೀ| ಸಿ. ಜಿ. ಕಾಮತರಿದ್ದರು. ನಗರ ಸಭಾಧಿಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ಕೊಂಗ್ರೆಸ್ ಹುರಿಯಾಳಾಗಿದ್ದರು. (ಕಳೆದಬಾರಿ ಶ್ರೀ| ಬಿ. ವೈಕುಂಠ ಬಾಳಿಗರವರು, ಈ ಕ್ಷೇತ್ರದಲ್ಲಿ, ಕಮ್ಯೂನಿಸ್ಟ್ ಪ್ರತಿಸ್ಪರ್ಧಿಯನ್ನು 6001 ಮತಗಳ ಹೆಚ್ಚಳದಿಂದ ಸೋಲಿಸಿದ್ದರು. ಆ ವರ್ಷ ಒಟ್ಟು ಬಿದ್ದ ಮತಗಳು 33,440 ಮಾತ್ರ; ಈ ಬಾರಿ ಎಂಟು ಸಾವಿರ ಮತಗಳು ಹೆಚ್ಚಿಗೆ ಬಿದ್ದಿವೆ. ಮತಗಳ ಎಣಿಕೆಯನ್ನು ಜನತೆ ಕುತೂಹಲದಿಂದ ನಿರೀಕ್ಷಿಸುತ್ತಿದೆ;

ಪಾರ್ಲಿಮೆಂಟಿಗೆ ಉತ್ತರವಿಭಾಗದ ಕೊಂಗ್ರೆಸ್ ಹುರಿಯಾಳು ಶ್ರೀ| ಯು. ಶ್ರೀನಿವಾಸ ಮಲ್ಯರನ್ನು ಈ ಬಾರಿಯೂ ಪಿ. ಎಸ್. ಪಿ. ಪತಿಯಿಂದ ಶ್ರೀ| ಡಿ. ಮೋಹನರಾಯರೇ ಎದುರಿಸಿದ್ದರು. ಇನ್ನೋರ್ವ ಸ್ವತಂತ್ರ ಹುರಿಯಾಳು ಕೂಡ ಇದ್ದರೂ ಶ್ರೀ| ಯು. ಶ್ರೀನಿವಾಸ ಮಲ್ಯರಿಗೂ, ಕಾರ್ಕಳ ಮತದಾರ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಿದ ಆರೋಗ್ಯಮಂತ್ರಿ ಡಾ| ಕೆ. ಕೆ. ಹೆಗ್ಡೆಯವರಿಗೂ ಸ್ಪರ್ಧೆಯು ತೀವ್ರವಾಗುವಂತೆ ಈ ಬಾರಿ ಅನೇಕ ಶಕ್ತಿಗಳು ಒಳಗಿಂದೊಳಗೆ ಕೆಲಸಮಾಡಿದ್ದುವು; ಮಾತ್ರವಲ್ಲ, ಒಂದೆರಡು ಪತ್ರಿಕೆಗಳು ಇವರಿಬ್ಬರಿಗೆದುರಾಗಿ ಬಿರುಸಿನ ಪ್ರಚಾರವನ್ನೂ ನಡೆಸಿದ್ದುವು,

ಬೆಳ್ತಂಗಡಿಯಲ್ಲಿ ಮಂತ್ರಿ ಶ್ರೀ| ಬಾಳಿಗರಿಗೆ ಸ್ವತಂತ್ರಪಕ್ಷದ ಶ್ರೀ| ಕೆ. ಬಿ. ಜಿನರಾಜ ಹೆಗ್ಗಡೆಯವರು ಪ್ರಬಲ ಪ್ರತಿಸ್ಪರ್ಧಿಯಾಗಿದ್ದರು.

—

## ದ್ವಾರಕಾ ಜಗದ್ಗುರುಗಳವರ ಸನ್ನಿಧಿಯಲ್ಲಿ

### ಶಾಲಾ ವಾರ್ಷಿಕೋತ್ಸವ

ತೀರ್ಥಹಳ್ಳಿ ತಾಲೂಕು ಮುಳುಬಾಗಿಲು ಗ್ರಾಮದ ಶ್ರೀ ಕೃಷ್ಣಾನಂದ ಮಾಧ್ಯಮಿಕ ಪಾಠಶಾಲಾ, ದೂರ್ವಾಸಪುರಂ, ಇದರ ವಾರ್ಷಿಕೋತ್ಸವವು ಶ್ರೀ ದ್ವಾರಕಾ ಜಗದ್ಗುರುಗಳವರ ಘನ ಸನ್ನಿಧಿಯಲ್ಲಿ ತಾ. 17ರಂದು ರಾಜ್ಯಸಭಾ ಉಪಾಧ್ಯಕ್ಷ ಶ್ರೀ| ಎಸ್. ಬಿ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು.

ಸ್ವಾಗತ ಪ್ರಾರ್ಥನೆ, ಬಹುಮಾನ ವಿತರಣೆಯಾದ ನಂತರ, ಶಾಲಾಭವನದ ದಾತೃಗಳಾದ ಶ್ರೀಶ್ರೀ ಜಗದ್ಗುರುಗಳವರು, ವಿದ್ಯಾಭ್ಯಾಸದ ಅವಶ್ಯಕತೆ, ಭಾರತೀಯ ಸಂಸ್ಕೃತಿಯ ಹಿರಿಮೆ, ಮುಂತಾದ ವಿಷಯದ ಮೇಲೆ ಮಾತನಾಡಿ ದ್ವಾರಕೆಯಲ್ಲಿ ಶ್ರೀಶ್ರೀಗಳವರಿಂದಲೇ ಸ್ಥಾಪಿಸಲ್ಪಟ್ಟು ನಡೆಸಲ್ಪಡುತ್ತಿರುವ ಯುನಿವರ್ಸಿಟಿ ರೂಪವಾದ ವಿದ್ಯಾಪೀಠದ ವಿಚಾರವನ್ನೂ ಪ್ರಸ್ತಾವಿಸಿ, ಸಭಿಕರನ್ನು ಆಶೀರ್ವದಿಸಿದರು.

ಅಧ್ಯಕ್ಷಭಾಷಣದಲ್ಲಿ ಶ್ರೀ! ಎಸ್.ವಿ. ಕೃಷ್ಣಮೂರ್ತಿರಾಯರು ಇಷ್ಟು ಸಣ್ಣ ಗ್ರಾಮದಲ್ಲಿ ಇಂತಹ ಭವ್ಯ ಕಟ್ಟಡವನ್ನು ನಿರ್ಮಿಸಿಕೊಟ್ಟಿರುವುದೇ ಶ್ರೀಶ್ರೀಗಳವರ ಔದಾರ್ಯ ಎಂದು ಹೇಳಿ ಜೀವನಮಟ್ಟವನ್ನು ಹೆಚ್ಚಿಸುವ ವಿದ್ಯೆಯೇ ಅತ್ಯಂತ ಆವಶ್ಯಕವೆಂದು ತಿಳಿಸಿ ಮಲೆನಾಡಿನಲ್ಲಿ ಇನ್ನೂ ಬಹಳ ಪ್ರಗತಿ ಆಗಬೇಕಾದ ಅವಶ್ಯಕತೆಯಿದೆಯೆನ್ನುತ್ತ ಶಾಲೆಯ ಪ್ರಗತಿಯನ್ನು ಹಾರೈಸಿದರು. ಈ ಸಮಾರಂಭಕ್ಕೆ ದಯಮಾಡಿಸಿದ ತಾಲೂಕು ಬೋರ್ಡ್ ಪ್ರೆಸಿಡೆಂಟ್ ಶ್ರೀ| ಬಿ. ಎಸ್ ರಂಗಪ್ಪನವರೂ, ಡಾ| ಕೆ ರಾಮಭಟ್ಟರವರೂ, ಮುಂತಾದ ಗಣ್ಯ ಮಹನೀಯರೂ, ಗ್ರಾಮಾಧಿಕಾರಿಗಳೂ, ಪೋಷಕವರ್ಗದವರೂ ಶುಭೇಚ್ಛೆಯನ್ನು ವ್ಯಕ್ತಪಡಿಸಿದರು. ಶಾಲಾ ಬಾಲಕ ಬಾಲಕಿಯರಿಂದ ವಿವಿಧವಿನೋದಾವಳಿ, ನಾಟಕ, ಮುಂತಾದ ಕಾರ್ಯಕ್ರಮಗಳು ನಡೆದು, ಮಂಗಳಾಚರಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

—

### ನಿಧನ

ಮಂಗಳೂರು ಕರ್ಬಲಾ ರಸ್ತೆಯಲ್ಲಿರುವ ಕಂಡತ್‌ಪಳ್ಳಿಯಲ್ಲಿ ಸುಮಾರು 25 ವರ್ಷಗಳ ತನಕ ಕತೀಬರಾಗಿ ಸೇವೆ ಸಲ್ಲಿಸಿ ಜನಪ್ರೀತರಾಗಿದ್ದ ಜನಾಬ್ ಎಂ. ಆಟಕೋಯರವರು ಕೆಲಸಮಯದಿಂದೀಚೆಗೆ ಅನಾರೋಗ್ಯದಿಂದಿದ್ದು ತಾ. 18 ರಂದು ಮುಂಜಾನೆ ಸ್ವಗೃಹದಲ್ಲಿ ತಮ್ಮ 52ನೇ ವರ್ಷ ಪ್ರಾಯದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತದಾನ

## ಉತ್ತರ, ದಕ್ಷಿಣ ಎರಡೂ ಕ್ಷೇತ್ರಗಳಲ್ಲಿ ಶೇಕಡಾ 60ರಷ್ಟು ಮಂದಿ ಮತದಾನಮಾಡಿದರು

## ಮಂಗಳೂರು 1ನೇ ಮತದಾರ ಕ್ಷೇತ್ರದಲ್ಲಿ ಶೇಕಡಾ 80ರ ಹೊಸ ದಾಖಲೆ

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಕ್ಷೇತ್ರದಲ್ಲಿ ಕಳೆದ ತಾ 19ರಂದು ಎಂಟು ವಿಧಾನಸಭಾ ಸ್ಥಾನಗಳಿಗೆ ಮತ್ತು ಒಂದು ಲೋಕಸಭಾ ಸ್ಥಾನಕ್ಕೆ ಮತದಾನವು ನಡೆಯಿತು. ಪ್ರತಿಯೊಂದು ಕಡೆಯಲ್ಲಿ ಐದು ವರ್ಷಗಳ ಹಿಂದಿನ ಚುನಾವಣೆಗಿಂತ ಹೆಚ್ಚಿನ ಹುರುಪು ಮತದಾರರಲ್ಲಿ ಕಂಡು ಬರುತಿತ್ತು. ಮೂಡಬಿದ್ರೆ ಮತ್ತು ಬೈಂದೂರುಗಳೆರಡು ಬಿಟ್ಟು ಉಳಿದ ಎಲ್ಲಾ ಕಡೆಗಳಲ್ಲಿ ಶೇಕಡಾ 55ಕ್ಕಿಂತ ಹೆಚ್ಚಿಗೆ ಮಂದಿ ಮತದಾನ ಮಾಡಿದ್ದರು. ಪ್ರತಿಯೊಂದು ಕಡೆ ಬಿರುಸಿನ ಸ್ಪರ್ಧೆಯಿತ್ತು. ಚಿಕ್ಕಪುಟ್ಟ ಒಂದೆರಡು ಘರ್ಷಣೆಗಳಲ್ಲದೆ ಮತದಾನವು ಶಾಂತ ರೀತಿಯಲ್ಲಿ ನಡೆದಿತ್ತು.

ಉತ್ತರ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿಗೆ ಓಟುಗಳು ಬಿದ್ದ ಕ್ಷೇತ್ರವೆಂದರೆ ಉಡುಪಿ. ಅಲ್ಲಿ ಶೇಕಡಾ 72ರಷ್ಟು ಮತದಾನವಾಗಿದೆ. ಅತ್ಯಂತ ಬಿರುಸಿನ ಸ್ಪರ್ಧೆ ಎಂದರೆ ಕೊಂಗ್ರೆಸ್ ಹುರಿಯಾಳು ಶ್ರೀ| ಮಧ್ವರಾಜ್ ಮತ್ತು ಪಿ. ಎಸ್. ಪಿ. ಉಮೇದ್ವಾರ ಹಾಗು ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಗೆದ್ದ ಶ್ರೀ| ಪಿ. ಉಪೇಂದ್ರ ಶ್ರೀನಿವಾಸ ನಾಯ್ಕ ಇವರೊಳಗೆ. ಅತ್ಯಂತ ಹೆಚ್ಚಿಗೆ ಮಂದಿ ಮತದಾನ ಮಾಡಿದುದರಿಂದ ಕೊಂಗ್ರೆಸ್ ಹುರಿಯಾಳು ಗೆಲ್ಲುವ ಸಂಭವ ಅಧಿಕವಿದೆಯೆಂದು ಹೆಚ್ಚಿನವರು ಆಡಿಕೊಳ್ಳುತ್ತಿದ್ದಾರೆ.

ಸುರತ್ಕಲ್–ಮುಲ್ಕಿ ಕ್ಷೇತ್ರದಲ್ಲಿ ಶೇಕಡಾ 63ರಷ್ಟು ಮತದಾನವಾಗಿದೆ. ಇಲ್ಲಿ ಕೂಡಾ ಬಿರುಸಿನ ಸ್ಪರ್ಧೆ ಕೊಂಗ್ರೆಸ್ ಮತ್ತು ಪಿ. ಎಸ್. ಪಿ. ಹುರಿಯಾಳುಗಳೊಳಗೆ. ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಗೆದ್ದ ಶ್ರೀ| ದೂಮಪ್ಪನವರು ಹಿಂದಿನ ಬಾರಿಯ ಅವರ ಎದುರಾಳಿ ಶ್ರೀ| ಸಂಜೀವನಾಥರನ್ನೇ ಎದುರಿಸಬೇಕಾಗಿ ಬಂದಿದೆಯಾದರೂ ಈ ಬಾರಿಯ ಸ್ಪರ್ಧೆ ಕಳೆದ ಬಾರಿಗಿಂತಲೂ ಬಿರುಸಾಗಿರುವುದರಿಂದ, ಪಿ. ಎಸ್. ಪಿ. ಕಡೆಯಿಂದ ಉತ್ಸಾಹಪೂರ್ಣ ಪ್ರಚಾರ ಮತ್ತು ಬೆಂಬಲ ಶ್ರೀ| ಸಂಜೀವನಾಥರಿಗೆ ದೊರಕಿದುದರಿಂದ ವಿಜಯಶ್ರೀ ಯಾವ ಕಡೆ ಒಲಿಯುವಳೋ ಮತಗಳ ಎಣಿಕೆಯಾದ ನಂತರವೇ ತಿಳಿಯಬೇಕಾಗಿದೆ.

ಮೂಡಬಿದ್ರೆ ಹರಿಜನ ಕಾದಿಟ್ಟ ಕ್ಷೇತ್ರದಲ್ಲಿ ಕೊಂಗ್ರೆಸಿನ ಶ್ರೀ| ಉಳ್ಳಾಲ ಮಂಜಪ್ಪ (ಕಳೆದ ಚುನಾವಣೆಯಲ್ಲಿ ಗೆದ್ದವರು) ಮತ್ತು ಸ್ವತಂತ್ರ ಪಕ್ಷದ ಶ್ರೀ| ಗೋಪಾಲ ಸಾಲೆನ್ನರೊಳಗೆ ನೇರ ಸ್ಪರ್ಧೆಯಿದ್ದು ಇಲ್ಲಿ ಶೇಕಡಾ 45ರಷ್ಟು ಮಾತ್ರ ಮತದಾನವಾಗಿದೆ. ಉತ್ತರ ವಲಯದಲ್ಲಿ ಅತ್ಯಂತ ಕಡಿಮೆ ಮತದಾನವಾದ ಕ್ಷೇತ್ರವಿದು.

ಕುಂದಾಪುರದಲ್ಲಿ ಈ ಬಾರಿ ಶೇಕಡಾ 59ರಷ್ಟು ಮಂದಿ ಮತದಾನ ಮಾಡಿರುವರು. ಕಳೆದ ಬಾರಿ ಪಿ ಎಸ್ ಪಿ ಅಭ್ಯರ್ಥಿ ಶ್ರೀ| ವಿ. ಶ್ರೀನಿವಾಸ ಶೆಟ್ಟಿ ಮತ್ತು ಕೊಂಗ್ರೆಸ್ ಹುರಿಯಾಳು ಶ್ರೀ| ಕೆ. ಸೂರ್ಯನಾರಾಯಣ ಅಡಿಗರೊಳಗೆ ಬಿರುಸಿನ ಸ್ಪರ್ಧೆಯಿದ್ದುದಾದರೆ ಈ ಬಾರಿ ಅಡಿಗರ ಸ್ಥಾನದಲ್ಲಿ ಮಾಜಿ ಎಂ. ಎಲ್. ಎ. ಶ್ರೀ| ಎಸ್. ಎಸ್. ಕೊಳ್ಕೆಬೈಲರು ಶೆಟ್ಟರನ್ನು ಎದುರಿಸುತ್ತಿದ್ದಾರೆ. ಕಳೆದ ಬಾರಿಯಂತೆ ಈ ಬಾರಿಯೂ ಸೋಲು ಗೆಲವುಗಳ ಅಂತರ ಕಲವು ನೂರರಷ್ಟು ಮತಗಳ ಮೇಲೆ ಅಚೆ ಈಚೆ ಆಗಬಹುದು.

ಕಾಪು ಕ್ಷೇತ್ರದಲ್ಲಿ ಕುಂದಾಪುರದಷ್ಟೇ (ಶೇಕಡಾ 59) ಮತದಾನವಾಗಿದೆ. ಕೊಂಗ್ರೆಸ್ ಹುರಿಯಾಳು ಹಾಗು ಪ್ರಚಲಿತ ಎಂ. ಎಲ್. ಎ. ಶ್ರೀ| ಎಫ್. ಎಕ್ಸ್. ಡಿ. ಪಿಂಟೋರವರೇ ಈ ಬಾರಿಯೂ ಈ ಕ್ಷೇತ್ರದಿಂದ ಗೆದ್ದುಬರುವ ಸಂಭವ ಅಧಿಕವೆಂದು ಆ ಕ್ಷೇತ್ರ ಸಂದರ್ಶಿಸಿ ಬಂದವರ ಅಭಿಮತ.

ಉತ್ತರ ವಲಯದಲ್ಲಿ ಎಲ್ಲರ ಕುತೂಹಲ ಕೇಂದ್ರಿಕೃತವಾದ ಕ್ಷೇತ್ರವೆಂದರೆ ಕಾರ್ಕಳ. ಪ್ರಸ್ತುತಃ ಮೈಸೂರು ಸರಕಾರದ ಆರೋಗ್ಯ ಮಂತ್ರಿಗಳಾಗಿರುವ ಡಾ| ಕೆ. ಕೆ. ಹೆಗ್ಡೆಯವರು ಸ್ವತಂತ್ರ ಹುರಿಯಾಳು ಶ್ರೀ| ದಯಾನಂದ ಕಲ್ಲೆಯವರ ಬಿರುಸಿನ ಸ್ಪರ್ಧೆಯನ್ನು ಅಲ್ಲಿ ಎದುರಿಸಬೇಕಾಗಿದೆ. ಪಿ. ಎಸ್. ಪಿ.ಯ ಸಂಪೂರ್ಣ ಬೆಂಬಲ ಪಡೆದ ಕಲ್ಲೆಯವರು ಗೆದ್ದು ಬರುವಂತೆ ಭಾರೀ ಪ್ರಯತ್ನ ನಡೆದಿದೆ ಎಂಬ ಕಿರಿವದಂತಿಗಳೂ ಕೇಳಬರುತ್ತಿವೆ. ಈ ಕ್ಷೇತ್ರದಲ್ಲಿ ಶೇಕಡಾ 65ರಷ್ಟು ಮತದಾನವಾಗಿದೆ. ಶ್ರೀ| ಹೆಗ್ಡೆಯವರ ಪರವಾಗಿ ಕೊನೆಯ ಗಳಿಗೆಯಲ್ಲಿ ನಡೆದ ಮಿಂಚಿನ ಯತ್ನಗಳು ಫಲ ತರಬಹುದೆಂಬ ಆಶಾವಾದ ಮತದಾನದ ವೇಳೆ ಆ ಕ್ಷೇತ್ರದಲ್ಲಿ ಹಾಜರಿದ್ದ ರಾಜಕಾರಣಿಗಳಿಂದ ಕೇಳಿಬರುತ್ತದೆ.

ಬ್ರಹ್ಮಾವರ ಕ್ಷೇತ್ರದಲ್ಲಿ ಶೇಕಡಾ 57 ರಷ್ಟು ಮತದಾನವಾಗಿದೆ. ಜನಸಂಘದ ಪ್ರತಿನಿಧಿ ಶ್ರೀ| ಮಹಾಬಲೇಶ್ವರ ಅಡಿಗರ ಪರವಾಗಿ ಭಾರೀ ಕೆಲಸ ನಡೆದಿದೆಯೆಂದು ಕೇಳಬರುತ್ತಿದೆಯಾದರೂ ತೀವ್ರ ಸ್ಪರ್ಧೆ ಪಿ. ಎಸ್. ಪಿ. ಹುರಿಯಾಳು ಶ್ರೀ| ಶೀನಪ್ಪ ಶೆಟ್ಟಿ ಮತ್ತು ಕೊಂಗ್ರೆಸ್ ಅಭ್ಯರ್ಥಿ ಶ್ರೀ| ಧರ್ಮಸಾಮ್ರಾಜ್ಯ ಇವರಲ್ಲೊಬ್ಬರು ಆರಿಸಿಬರುವುದು ನಿಶ್ಚಯವೆಂದು ಸ್ಥಳೀಯರ ಅಭಿಮತ.

ಬೈಂದೂರಿನಲ್ಲಿ ಒಟ್ಟು ಬಿದ್ದ ಮತಗಳು ಶೇಕಡಾ 50. ಕೊಂಗ್ರೆಸ್ ಅಭ್ಯರ್ಥಿ ಶ್ರೀ| ಯೆಡ್ತರೆ ಮಂಜಯ್ಯ ಶೆಟ್ಟರೇ ಈ ಬಾರಿಯೂ ಆರಿಸಿಬರುವ ಸಂಭವ ಅಧಿಕವೆಂದು ಹೆಚ್ಚಿನವರ ಊಹಾಪೋಹೆಯಾಗಿದೆ.

ಇನ್ನು ಈ ವಲಯದ ಲೋಕಸಭಾ ಸ್ಥಾನಕ್ಕೆ ಹಿಂದಿನ ಎರಡು ಚುನಾವಣೆಗಳಲ್ಲಿ ಗೆದ್ದುಬಂದ ಶ್ರೀ| ಯು. ಶ್ರೀನಿವಾಸ ಮಲ್ಯರೇ ಈ ಬಾರಿಯೂ ಆರಿಸಿಬರುವ ನಿರೀಕ್ಷೆಯಿದೆಯಾದರೂ ಎದುರಾಳಿ ಪಿ. ಎಸ್. ಪಿ ಅಭ್ಯರ್ಥಿ ಶ್ರೀ| ಡಿ. ಮೋಹನರಾಯರಿಂದ ಈ ಬಾರಿ ಕಳೆದ ಬಾರಿಗಿಂತಲೂ ಬಿರುಸಿನ ಸ್ಪರ್ಧೆ ಅವರು ಎದುರಿಸಬೇಕಾದೆ ಎಂಬುದು ನಿರ್ವಿವಾದ ಹಾಗಾಗಿ ಗೆದ್ದುಬರುವ ಮತಗಳ ಅಂತರ ಈ ಬಾರಿ ಕಳೆದ ಬಾರಿಗಿಂತ ಸಾಕಷ್ಟು ಕಡಿಮೆ ಇರಬಹುದು. ಈ ವಲಯದಲ್ಲಿರುವ ಒಟ್ಟು ಮತಗಳ ಶೇಕಡಾ 59ರಷ್ಟು ಮತದಾನವಾಗಿದೆ ಎನ್ನಲಾಗಿದೆ.

ದಕ್ಷಿಣ ವಲಯದ ಎಂಟು ಕ್ಷೇತ್ರಗಳಲ್ಲಿ ಮತದಾನವು ತಾ 22ರಂದು ಬೆಳಿಗ್ಗೆ 8ರಿಂದ ಸಾಯಂಕಾಲ 5ರ ತನಕ ಶಾಂತ ರೀತಿಯಲ್ಲಿ ನಡೆಯಿತು. ಈ ವಲಯದಲ್ಲಿ ಒಟ್ಟು ಮತಗಳ ಶೇಕಡಾ 61ರಷ್ಟು ಮತದಾನವಾಗಿದೆ ಎನ್ನಲಾಗಿದೆ.

ಅತ್ಯಂತ ಬಿರುಸಿನ ಸ್ಪರ್ಧೆ ಇದ್ದ ಕ್ಷೇತ್ರಗಳೆಂದರೆ ಮಂಗಳೂರು, ಬೆಳ್ತಂಗಡಿ, ಪಾಣೆಮಂಗಳೂರು ಮತ್ತು ಪುತ್ತೂರು. ಈ ವಲಯದಲ್ಲಿ ಕಳೆದ ಬಾರಿ ಕೊಂಗ್ರೆಸ್ಸು ಎಲ್ಲಾ ಸ್ಥಾನಗಳನ್ನು ಗೆದ್ದಿತ್ತಾದರೆ ಈ ಬಾರಿ ಒಂದೆರಡು ಸ್ಥಾನಗಳು ಕೊಂಗ್ರೆಸ್ಸಿನ ಕೈತಪ್ಪುವ ಸಂಭವ ಕಂಡುಬಂದಿದೆ.

ಚತುಷ್ಕೋನ ಸ್ಪರ್ಧೆಯಿರುವ ಮಂಗಳೂರು Iನೇ ಕ್ಷೇತ್ರದಲ್ಲಿ ಶೇಕಡಾ 80 ರಷ್ಟು ಮತದಾನವಾಗಿದ್ದು, ಇದು ಇಡೀ ಜಿಲ್ಲೆಯಲ್ಲಿ ಒಂದು ಹೊಸ ದಾಖಲೆ ಸ್ಥಾಪಿಸಿದೆ. ಜನಸಂಘ, ಸ್ವತಂತ್ರ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಅತ್ಯಂತ ಬಿರುಸಿನ ಸ್ಪರ್ಧೆ ಎದುರಿಸಬೇಕಾಗಿ ಬಂದರೂ ಕೊಂಗ್ರೆಸ್ ಅಭ್ಯರ್ಥಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರೇ ಗೆದ್ದುಬರಬಹುದೆಂದು ಪಕ್ಷಾತೀತರೆಲ್ಲರ ಆಶಾವಾದವಾಗಿದೆ.

ಮಂಗಳೂರು ಎರಡನೇ ಕ್ಷೇತ್ರದಲ್ಲಿ ಕಮ್ಯೂನಿಸ್ಟರ ಕೈಮೇಲಾಗಬಹುದೇ ಎಂಬ ಸಂದೇಹ ಆರಂಭದಿಂದಲೂ ಎಲ್ಲೆಲ್ಲಿಯೂ ಕೇಳಬರುತ್ತಿತ್ತು. ಕೊನೆಯ ಗಳಿಗೆಯ ತೀವ್ರ ಪ್ರಯತ್ನದಿಂದ ಕೊಂಗ್ರೆಸ್ ಅಭ್ಯರ್ಥಿ ಶ್ರೀ| ಬಿ. ಎಂ. ಇದಿನಬ್ಬನವರಿಗೂ ಹೆಚ್ಚಿನ ಮತಗಳು ಬಿದ್ದಿವೆ ಎಂದು ಆ ಕ್ಷೇತ್ರದವರಾಡಿಕೊಳ್ಳುತ್ತಾರೆ. ಅಂತೂ ಇಲ್ಲಿಯ ಫಲಿತಾಂಶವನ್ನು ನಿರ್ದಿಷ್ಟವಾಗಿ ತಿಳಿಯುವುದಿದ್ದರೆ ಅದು ಮತಗಳೆಣಿಕೆಯಾದ ನಂತರವೇ ಈ ಕ್ಷೇತ್ರದಲ್ಲಿಯೂ ಶೇಕಡಾ 76ರಷ್ಟು ಮತದಾನವಾಗಿದೆ.

ಉತ್ತರ ವಲಯದಲ್ಲಿ ಬೆಳ್ತಂಗಡಿ ಕ್ಷೇತ್ರವಿದ್ದಂತೆ ದಕ್ಷಿಣ ವಲಯದಲ್ಲಿ ಕುತೂಹಲ ಕೆರಳಿಸಿದ ಕ್ಷೇತ್ರವೆಂದರೆ ಬೆಳ್ತಂಗಡಿ. ಅಲ್ಲಿಯೂ ಕೊಂಗ್ರೆಸ್ ಅಭ್ಯರ್ಥಿಯಾಗಿ ಪ್ರಚಲಿತ ಸರಕಾರದ ಕಾನೂನು ಹಾಗು ಕಾರ್ಮಿಕ ಮಂತ್ರಿ ಶ್ರೀ| ಬಿ. ವೈಕುಂಠ ಬಾಳಿಗರು ಸ್ವತಂತ್ರ ಪಕ್ಷದ ಪ್ರಬಲ ಹುರಿಯಾಳು ಶ್ರೀ| ಕೆ. ಬಿ. ಜಿನರಾಜ ಹೆಗ್ಡೆಯವರನ್ನು ಎದುರಿಸಬೇಕಾಗಿ ಬಂದಿದೆ. ಈ ಕ್ಷೇತ್ರದಲ್ಲಿ ಶೇಕಡಾ 60 ರಷ್ಟು ಮತದಾನವಾಗಿದೆ. ಕೊಂಗ್ರೆಸ್ ಪಕ್ಷದ ಕಡೆಯಿಂದ ಅತ್ಯಧಿಕ ಶ್ರಮ ಈ ಕ್ಷೇತ್ರದಲ್ಲಿ ಕೇಂದ್ರಿಕೃತವಾದುದರಿಂದ ಶ್ರೀ| ಬಾಳಿಗರು ಅತ್ಯಲ್ಪ ಅಂತರದಲ್ಲಿ ಗೆದ್ದು ಬರಬಹುದೋ ಎಂಬ ಆಶಯ ಕುಡಿಮಿಂಚೊಂದು ಈ ಕ್ಷೇತ್ರದ ಕೆಲವು ಮೂಲೆಗಳಿಂದ ಮಿಂಚುತ್ತಿದೆ.

ಪಾಣೆಮಂಗಳೂರಲ್ಲಿಯೂ ಈ ಬಾರಿ ಕಳೆದ ಬಾರಿಗಿಂತಲೂ ಬಿರುಸಿನ ಸ್ಪರ್ಧೆಯಿದೆ. ಸ್ವತಂತ್ರ ಪಕ್ಷದ ಡಾ| ಎಂ. ಎಸ್. ಹೆಗ್ಡೆಯವರೂ ಸ್ಪರ್ಧಿಸುವುದರಿಂದ ಕೊಂಗ್ರೆಸಿಗೆ ಬೀಳುವ ಸಾಕಷ್ಟು ಪ್ರಮಾಣದ ಮತಗಳು ಅವರಿಗೆ ಬೀಳಬಹುದಾದ ಕಾರಣ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಗೆ ಗೆಲವು ನಿರೀಕ್ಷಿಸಲು ಅವಕಾಶ ದೊರೆವಂತಾಗಿದೆ. ಇಲ್ಲಿ ಶೇಕಡಾ 61ರಷ್ಟು ಮತದಾನವಾಗಿದೆ. ಕೊಂಗ್ರೆಸ್ ಅಭ್ಯರ್ಥಿ ಡಾ| ನಾಗಪ್ಪ ಆಳ್ವರನ್ನು ಹೇಗಾದರೂ ಗೆಲ್ಲಿಸಲೇಬೇಕು ಎಂಬ ಭಗೀರಥ ಯತ್ನವೂ ನಡೆಯದಿಲ್ಲ.

ಪುತ್ತೂರು ಕ್ಷೇತ್ರದಲ್ಲಿ ಶೇಕಡಾ 58 ರಷ್ಟು ಮತದಾನವಾಗಿದೆ. ಸ್ವತಂತ್ರ ಪಕ್ಷವು ಅತ್ಯಂತ ಹೆಚ್ಚಿಗೆ ಶ್ರಮ ಸುರಿಸಿದ ಕ್ಷೇತ್ರವಿದು ಜನಸಂಘದ ಪ್ರಯತ್ನವೂ ಕಡಿಮೆಯಾಗಿಲ್ಲ. ಈ ಎರಡು ಪಕ್ಷಗಳ ಶ್ರಮದ ಪೈಪೋಟಿಯಲ್ಲಿ ಕೊಂಗ್ರೆಸ್ ಅಭ್ಯರ್ಥಿ ಶ್ರೀ| ವೆಂಕಟ್ರಮಣ ಗೌಡರು ಕೆಲವೇ ಮತಗಳಿಂದಾದರೂ ಇದೀಗ ಮೂರನೇ ಬಾರಿಯೂ ಗೆದ್ದುಬಂದರೆ ಅದೊಂದು ಆಶ್ಚರ್ಯವೇ.

ಸುಳ್ಯ ಮತದಾರ ಕ್ಷೇತ್ರದಲ್ಲಿ ಕೊಂಗ್ರೆಸ್ ಅಭ್ಯರ್ಥಿ ಶ್ರೀ| ಸುಬ್ಬಯ್ಯ ನಾಯ್ಕರೂ ಈ ಬಾರಿ ತೀವ್ರ ಸ್ಪರ್ಧೆ ಎದುರಿಸಬೇಕಾಗಿ ಬಂದಿದೆ. ಅಲ್ಲಿ ಶೇಕಡಾ 53ರಷ್ಟು ಮತದಾನವಾಗಿದೆಯನ್ನಲಾಗಿದೆ.

ಮಡಿಕೇರಿ, ವಿರಾಜಪೇಟೆಗಳಲ್ಲಿ ಅನುಕ್ರಮವಾಗಿ ಶೇಕಡಾ 50 ಮತ್ತು 54 ರಷ್ಟು ಮತದಾನವಾಗಿದ್ದು ಎರಡೂ ಕಡೆಗಳಲ್ಲಿ ಕೊಂಗ್ರೆಸ್ ಅಭ್ಯರ್ಥಿಗಳು ಗೆದ್ದು ಬರಬಹುದೆಂದು ಮತದಾನದಂದು ಕೊಡಗಿನಲ್ಲಿದ್ದ ಪ್ರತ್ಯಕ್ಷದರ್ಶಿಗಳೊಬ್ಬರ ಅಭಿಪ್ರಾಯ.

[4ನೇ ಪುಟಕ್ಕೆ ಮುಂದುವರಿದಿದೆ]

ತುಳುಸಂಧಿಯ ಕತೆ–೨೧.

# ಮುಗ್ಧ ಸತಿಯ ಪತಿಪ್ರೇಮ

ಸುರಲಡಿ ಬೀಡಿನ ಸುರಲಡಿ ಸುರಪರಿಗೆ ದಂಡಿನಾಜ್ಞೆ ಬಂತು. ಅವರು ಊರಿನ ಯುವಕರಿಗೆ ಕರೆ ಇತ್ತರು. ದಂಡುಕೂಡಿಸಿ ಅದರ ನಾಯಕತ್ವವನ್ನು ಯುಕ್ತನಾದವನೊಬ್ಬನಿಗೆ ವಹಿಸಿಕೊಟ್ಟು ಹೊರಡಿರೆಂದು ಯುವಜನ ಸಮುದಾಯಕ್ಕೆ ಬೇಡಿಕೊಂಡರು.

ಆಗ ಊರಿನ ಯುವಕರು ಅವರಿಗೆ ಹೀಗೆಂದರು:

"ಮೇಲ್‌ಬಂಗಾಡಿ ಗುತ್ತಿನಲ್ಲಿ ನಿಮ್ಮ ಅಳಿಯ ಇದ್ದಾನೆ. ದಂಡು ಸಾಧಿಸಿಬರುವುದಕ್ಕೆ ಅವನಿಗೆ ಹೇಳಿರಿ."

ಸುರಪರು ಪ್ರತ್ಯುತ್ತರಿಸಿದರು:

"ಅವನು ಎಳೆಪ್ರಾಯದ ಹುಡುಗ. ದಳಪತಿಯಾಗಿ ಹೋಗುವಷ್ಟರ ಮಟ್ಟಿನ ಅನುಭವ ಅವನಿಗೆ ಸಾಲದು."

"ನಿಮ್ಮ ಅಳಿಯನಿಗೆ ಮೈನೆರೆದ ಹೆಣ್ಣನ್ನು ಮದುವೆಯಾಗಿ ಮನೆಮಾಡಿಕೊಂಡಿರುವುದಕ್ಕೆ ಎಳೆ ವಯಸ್ಸು ಅಡ್ಡಬರಲಿಲ್ಲ; ದಳಪತಿಯಾಗಿ ಹೋಗಿ ದಂಡು ಸಾಧಿಸಿ ಬರುವುದಕ್ಕೆ ಮಾತ್ರ ಎಳೆಪ್ರಾಯ!? ಹ್ಹ ಹ ಹಾ! ಚೆನ್ನಾಗಿ ಹೇಳಿದಿರಿ. ನಿಮ್ಮ ಅಳಿಯ ಚೆಲುವ ಚಿಕ್ಕ ಮಡದಿಯೊಡಗೂಡಿ ಚಕ್ಕಂದವಾಡಿಕೊಂಡಿರಲಿ! ನಾವು ಯುದ್ಧರಂಗಕ್ಕೆ ಹೋಗಿ ಪ್ರಾಣ ತೆರಬೇಕೇ? ಹಾಗೇನೂ ನಮ್ಮ ಮಂಡೆಯಲ್ಲಿ ಹುಳ ಬಿದ್ದುಕೊಳ್ಳಲಿಲ್ಲ, ಸರಪರೇ."

ಈ ಪರಿಯಾಗಿ ಯುವಕರು ತನ್ನ ಅಳಿಯನನ್ನು ಚೇಷ್ಟಿಸಿದುದರಿಂದ ಸುರಪರ ಮನಸ್ಸು ರೋಸಿಕೊಂಡಿತು. ಮೇಲ್‌ಬಂಗಾಡಿ ಗುತ್ತಿನ ತನ್ನ ಅಳಿಯ ಕುಮಾರ ಉಮ್ಮಣ ನಂದನಿಗೆ ಸುರಪರು ತಡಮಾಡದೆ ಓಲೆಯೊಂದನ್ನು ಬರೆದರು. ಓಲೆಯ ಮಾಣಿಯನ್ನು ಕರೆದರು. ಅವನ ಕೈಯಲ್ಲಿ ಓಲೆಯನ್ನು ಕೊಟ್ಟು ಅವನನ್ನು ಮೇಲ್‌ಬಂಗಾಡಿ ಗುತ್ತಿಗೆ ಅಟ್ಟಿದರು.

ಮೇಲ್‌ಬಂಗಾಡಿ ಗುತ್ತಿಗೆ ಓಲೆಕಾರನು ಬಂದಾಗ, ನಂದನು ಬೀಡಿನಲ್ಲಿರಲಿಲ್ಲ. ಆಟದ ಬಯಲಿಗೆ ಹೋಗಿದ್ದನು. ನಂದನ ಹೆಂಡತಿ ನಂದಿನಿಯೊಡನೆ ಓಲೆಕಾರ ವಿಚಾರಿಸಿದನು:

"ನಂದರು ಇಲ್ಲವೇ? ನಾನು ಓಲೆಯ ಮಾಣಿ. ಸುರಲಡಿ ಬೀಡಿನಿಂದ ನಂದರಿಗೆ ಓಲೆ ತಂದಿರುತ್ತೇನೆ."

"ಅದನ್ನು ಇತ್ತ ಕೊಡು. ಅವರು ಈಗ ಇಲ್ಲ. ಹೊರಗೆ ಹೋಗಿದ್ದಾರೆ."

ಹೀಗೆಂದು ಹೇಳಿ ನಂದಿನಿ ಓಲೆಕಾರನಿಂದ ಓಲೆ ತೆಗೆದುಕೊಂಡಳು. ಓಲೆಯನ್ನು ಬಿಡಿಸಿ ಓದಿದಳು. ಓದುವಾಗ ಅವಳಿಗೆ ಕಿಸ್ಸನೇ ನಗು ಬಂತು. ಓಲೆಯನ್ನು ಹಾಗೇ ಮಡಚಿ ಓಲೆಯ ಹಲಗೆಯ ಮೇಲಿಟ್ಟಳು. ಬಳಿಕ ತಲೆಗೆ ಅವಕುಂತನವನ್ನು ಎಳೆದುಕೊಂಡಳು. ನೆಟ್ಟನೇ ಆಟದ ಬಯಲಿಗೆ ನಡೆದಳು. ಅಲ್ಲಿಗೆ ಹೋಗಿ "ಇರೆ ಮದೆ ಕಾಯಿ ಅದೆ" (ಪೊದೆಯ ಮಧ್ಯದಲ್ಲಿ ಹುದುಗಿದ ಕಾಯಿಯಂತೆ ಮರೆ)ಯಾಗಿ ನಿಂತಳು. ಮುಂದುಗಡೆಯಲ್ಲಿ ಗೋವಳ ಹುಡುಗರ ಸಂಗಡ ಕುಟ್ಟಿದೊಣ್ಣೆ ಆಟದಲ್ಲಿ ನಿರತನಾದ ತನ್ನ ಗಂಡ ನಂದನನ್ನುದ್ದೇಶಿಸಿ ಹೀಗೆ ಬಿತ್ತರಿಸಿದಳು:

"ಕುಟ್ಟಿದೊಣ್ಣೆ ಆಡುವುದಕ್ಕೆ ಇದು ಕಾಲವೇ? ಇನ್ನೂ ನಿಮ್ಮ ಮಕ್ಕಳಾಟಿಕೆ! ಮರುಳ ಬುದ್ಧಿ! ಮನೆಗೆ ಬರಬಾರದೇ?"

ಕುಶಾಲುಬಾಯಿ ಹುಡುಗನೊಬ್ಬ ನಗುತ್ತ, ಕೇಕೆಹಾಕುತ್ತ ಈ ರೀತಿ ಗಟ್ಟಿಯಾಗಿ ಧ್ವನಿಮಾಡಿದನು.

"ವಹವ್ವಾ! ಈಗ ಎಲ್ಲಿಗೆ ಓಡಿತು ನಿಮ್ಮ ನಾಚಿಕೆ? ನಿಮ್ಮ "ಪೇಸಿಕೆ" (ಸಂಕೋಚ)? ಗಂಡ ಹೆಂಡಿರ ಮಧ್ಯದ ತೆರೆ ಪಟ ಹರಿದುಹೋಯಿತು! ಇಷ್ಟು ದಿವಸ ಮನೆಯಲ್ಲಿ ಒಬ್ಬರನ್ನೊಬ್ಬರು ಸಂಧಿಸುವಾಗ ಹಾವನ್ನು ಮೆಟ್ಟಿ ಸರಕ್ಕನೆ ಹಿಂದೆ ಸರಿಯುವ ಹಾಗೆ ವರ್ತಿಸುತ್ತಿದ್ದಿರಿ. ಗಂಡಹೆಂಡತಿಯರು ಹೀಗೆ ಇನ್ನೆಷ್ಟು ದಿವಸ ನಾಚಿಗೆಪಟ್ಟುಕೊಂಡಿದ್ದಾರು? ಹೋಗೋ, ನಂದ—ಹೋಗು! ನಿನ್ನ ರಾಣಿ ಮನೆಯಲ್ಲಿ ತಂಬಿಟ್ಟಿನ ಲಡ್ಡು ತಯಾರಿಸಿಟ್ಟು ನಲ್ಮೆಯ ಗಂಡನನ್ನು ಕರೆದೊಯ್ಯುವದಕ್ಕೆ ಬಂದಳೆಂದು ಕಾಣುತ್ತೆ. ಮಹಾರಾಯಾ, ದಯಮಾಡಿ ಹೋಗು!"

ಹೆಂಡತಿಯು ಆಕಸ್ಮಿಕವಾಗಿ ಬಂದುಕೊಂಡುದರಿಂದ ನಂದನು ಬೆಕ್ಕನೆ ಬೆರಗಾಗಿಕೊಂಡಿದ್ದನು. ಕುಟ್ಟಿಯನ್ನು ಅಚೆಗೆ ಬಿಸಾಡಿದನು. ದೊಣ್ಣೆಯನ್ನು ಈಚೆಗೆ ಬಿಸುಡಿದನು. ಹುಡುಗರ ಕುಚೋದ್ಯ ಕೊಂಕುನುಡಿಗಳನ್ನಾವುದನ್ನೂ ಲಕ್ಷಿಸದೆ ಅವರ ಮಧ್ಯದಿಂದ ನೆಟ್ಟಗೇ ಹೊರಟು ತನ್ನ ಗುತ್ತಿನ ಮನೆಯ ಹಾದಿ ಹಿಡಿದನು. ನಂದಿನಿ ಅವನನ್ನು ಹಿಂಬಾಲಿಸಿ ಹೋದಳು.

ಮನೆಗೆ ಬಂದ ಪತಿಗೆ ನಂದಿನಿ ಓಲೆ ತೆಗೆದುಕೊಟ್ಟಳು. ನಂದನು, ಮಾವನವರು ತನಗೆ ಬರೆದ ಓಲೆಯನ್ನು ಓದಿದನು. ಅದರಲ್ಲಿ ಈ ರೀತಿ ಬರೆದಿದ್ದರು:

"ಮೇಲ್‌ಬಂಗಾಡಿ ಗುತ್ತಿನ ನನ್ನ ಪ್ರೀತಿಯ ಅಳಿಯನಾದ ಕುಮಾರ ಉಮ್ಮಣ ನಂದನಿಗೆ ಸುರಲಡಿ ಬೀಡಿನಿಂದ ನಿನ್ನ ಮಾವನು ಬರಕೊಂಡದ್ದೇನೆಂದರೆ—

"ನನಗೆ ಅಳರಸರ ದಂಡಿನಾಜ್ಞೆಯಾಗಿದೆ. ದಂಡುಗೂಡಿಸಿ ಅದರ ನಾಯಕತ್ವವನ್ನು ವಹಿಸಿ ಈ ಬಾರಿಯೂ ಹೊರಟೇನೆಂದರೆ ನನ್ನ ವಯೋಮಾನದ ದೌರ್ಬಲ್ಯ ನಿಶ್ಶಕ್ತಿಗಳೂ ನನ್ನನ್ನು ಅಡಗಾಣಿಸಿಕೊಂಡಿವೆ. ಆದರೆ, ನಮ್ಮ ಒಡೆಯನ ಸೇವೆ, ತನ್ಮೂಲಕ ತುಳುನಾಡಿನ ಶ್ರೇಯಸ್ಸು ನಮ್ಮ ಕುಟುಂಬದ ಗುರುತರ ಜವಾಬ್ದಾರಿಕೆಯಾಗಿ ಇಷ್ಟೊಂದು ಕಾಲ ನಡೆದುಬಂದಿದೆ. ದಂಡುಗೂಡಿಸಿ, ದಂಡಿನ ನಾಯಕತ್ವವನ್ನು ಸಮರ್ಥನೊಬ್ಬನಿಗೆ ವಹಿಸಿಕೊಟ್ಟು, ಹೊರಡಿರೆಂದು ನಾನು ಊರಿನ ಯುವಜನರಿಗೆ ಕರೆಯಿತ್ತಾಗ ನನಗೆ—ಅಲ್ಲ ನಿನಗೆ—ಅಪಹಾಸ್ಯಕರ ನುಡಿಗಳನ್ನಾಡಿದರು. "ಸುರಲಡಿ ಸುರಪೆರೆಗ್ ತರೆಕಬ್ಬಿಂಡಲಾ ಊರುದ ಜವನೆರೆಗ್ ಪಾದಲಾ ಕಬ್ಬಿಜಿ." (ಸುರಲಡಿ ಬೀಡಿನ ಸುರಪರು ವೃದ್ಧಾಪ್ಯತನದ ಬಳುವು ಬಂಧನದಲ್ಲಿ ಮುಳುಗಿರುವುದು ಊರಿನ ಜವ್ವನಿಗರ ತಿಳುವಿಗೆ ರವಷ್ಟೂ ಅವಬೋಧವಾಗದೇ ಹೋಯಿತು.) ದಂಡು ಸಾಧಿಸುವುದಕ್ಕೆ ಊರಿನ ಜವ್ವನಿಗರು ಬೇಕು. ಮೇಲ್‌ಬಂಗಾಡಿ ಗುತ್ತಿನಲ್ಲಿ ಮೈನೆರೆದ ವಧುವಿನೊಂದಿಗೆ ಅಳಿಯನು ಮಾತ್ರ ಚೆಲ್ಲಾಟವಾಡಿ ಪಿಕೆ ಮೆರೆದಿದ್ದರೆ ಸಾಕು ಎಂಬುದಾಗಿ ಅವರು ಅಣಕಿಸಿದರು. ಇದನ್ನು ನೀನು ನಿನಗೊಂದು ಪಂಥಾಹ್ವಾನವೆಂದು ಪರಿಗಣಿಸು. ಮಗನೇ, ಅಪಮಾನವನ್ನು ಕಳೆ. ದಂಡಿನ ನಾಯಕತ್ವವನ್ನು ನೀನು ವಹಿಸಿ, ದಂಡು ಸಾಧಿಸಿ ವಿಜಯಿಯಾಗಿ ಬಾ. ಕುಚೇಷ್ಟೆಗಾರರು ಮೂಗಿಗೆ ಬೆರಳಿಟ್ಟುಕೊಳ್ಳುವಂತೆ ಮಾಡು. ನಿನ್ನನ್ನು ನಂಬಿದ್ದೇನೆ. ಅನಂತ ಆಶೀರ್ವಾದಗಳು—

—ಇಂತು ಸುರಲಡಿ ಸುರಪ."

ಮಾವನ ಅಪೇಕ್ಷೆಯಂತೆ ನಂದನು ದಂಡಿಗೆ ಹೊರಡುವ ಸಂಕಲ್ಪ ತೊಟ್ಟನು.

ನಂದಿನಿಗೆ ದಂಡಿನ ಸಾಹಿತ್ಯಗಳನ್ನು ಜೋಡಿಸಿಡೆಂದನು. ನಂದಿನಿ ಉಪ್ಪು ಕರಟಿಸಿದಳು. ಮೆಣಸು, ಹುಳಿಗಳನ್ನು ತೆಗೆದಿಟ್ಟಳು. ಬ್ರಾಹ್ಮೀಯನ್ನು ಗದ್ದೆಯಿಂದ ತಂದು ಚಟ್ನಿ ಕಡಿಯಬೇಕು. ಇವುಗಳನ್ನೆಲ್ಲ ಹಾಳೆಯಲ್ಲಿ ಕಟ್ಟಿ, ಅನ್ನದ ಬುತ್ತಿಯೊಂದಿಗೆ ತನ್ನ ಪತಿಗೆ ಒಪ್ಪಿಸಬೇಕು. ನಂದಿನಿ ಬ್ರಾಹ್ಮಿಯನ್ನು ಕಿತ್ತು ತರುವುದಕ್ಕೆ ಗದ್ದೆಯ ಹುಣಿಗೆ ನಡೆದಳು. ಆ ವೇಳೆಯಲ್ಲಿ ಊರಿನ ಸ್ತ್ರೀಪುರುಷರನೇಕರು ಅಲಂಕೃತರಾಗಿಕೊಂಡು ಗದ್ದೆಯ ಮಗ್ಗಲಿನ ರಸ್ತೆಯ ಮೇಲೆ ನಡೆದುಹೋಗುತ್ತಿರುವ ದೃಶ್ಯವು ನಂದಿನಿಗೆ ಕಾಣಿಸಿತು. ಕುತೂಹಲಿಯಾಗಿ ನಂದಿನಿ ಅವರನ್ನು ಪ್ರಶ್ನಿಸಿದಳು:

"ನೀವು ಎಲ್ಲಿಗೆ ಹೋಗುತ್ತಿದ್ದೀರಿ?"

"ಪೆಡ್ಡೂರಿಂದ್ರ ದೇವಸ್ಥಾನದ ಜಾತ್ರೆ ಈವತ್ತು. ಅಲ್ಲಿಗೆ ನಾವು ಹೋಗುತ್ತಿದ್ದೇವೆ."

ನಂದಿನಿ ಕತ್ತಿಯನ್ನು ಗದ್ದೆಯ ಹುಣಿಯ ಮೇಲಿಟ್ಟು ಉಟ್ಟ ವಸ್ತ್ರದಲ್ಲೇ ಆ ಮಂದಿಗಳ ಬೆಂಬೊತ್ತಿ ದೇವಸ್ಥಾನದ ದಾರಿ ಹಿಡಿದಳು.

ನಂದಿನಿ ದೇವಸ್ಥಾನಕ್ಕೆ ಬರುವಾಗ ಹೊತ್ತು ಪ್ರದಕ್ಷಿಣೆ ಹೊರಟ ದೇವರು ಕೊಡಿಮರದ ಅಡಿಗೆ ಬಂದಿದ್ದರು. ನಂದಿನಿ ಬಲಕ್ಕೆ ಸೆರಗನ್ನೆಳೆದುಕೊಂಡಳು. ಮುಂದೆ ಸರಿದು ದಂಬೆಗಲ್ಲ ಒತ್ತಿನಲ್ಲಿ ಆನೆಕಲ್ಲ ಪಕ್ಕದಲ್ಲಿ ಕೊಡಿಮರದ ನೆರಳಲ್ಲಿ ನಿಂತಳು. ದೇವರೊಡನೆ ವಿನೋಚನೆ ಕೇಳುವುದಕ್ಕಾಗಿ ಕೈಜೋಡಿಸಿಕೊಂಡು ಶ್ರದ್ಧಾಭಕ್ತಿಯಿಂದ ಪ್ರತೀಕ್ಷಿಸಿದಳು.

ದೇವರ ಮೈಪಾತ್ರಿಯು ಕೇಳಿದನು:

"ಹೆಣ್ಣೇ, ನೀನೇಕೆ ನಿಂತಿರುವೆ?"

"ದೇವರೇ, ನನ್ನ ಗಂಡನವರಿಗೆ—ಬಡಗಿನಿಂದ ಅತಿಕ್ರಮಿಸಿದ ದಂಡು, ತೆಂಕಲಿನಿಂದ ಮುಂದೊತ್ತಿದ ದಂಡು, ನಾಲ್ಕು ಮೂಲೆಯ ನಾಲ್ಕು ಮುಖದ ದಂಡು ತೋರಿವೆ. ದೇವರೇ! ದಂಡಿನ ನಾಯಕತ್ವವನ್ನು ವಹಿಸಿದ ನನ್ನ ಯಜಮಾನರಿಗೆ ರಕ್ಷೆಯನ್ನಿತ್ತು ಸಮರದಲ್ಲಿ ಜಯವು ಅವರ ಪಾಲಿಗೆ ಒದಗುವ ಅನುಗ್ರಹವನ್ನು ಮಾಡಿರೆಂದು ಸೆರಗೊಡ್ಡಿ ಬೇಡುತ್ತೇನೆ."

ದೇವರ ಮೂರಿಲೆ ಗಂಧ ತೆಗೆದು, ಪಾತ್ರಿ, ನಂದಿನಿಯ ಸೆರಗಿಗೆ ಒಗೆದನು.

"ತೆಗೆದುಕೋ. ಈ ಗಂಧವನ್ನು ನಿನ್ನ ಪತಿಯು ದಂಡಿಗೆ ಹೊರಡುವಾಗ ಮುಂಡಾಸಿನೆಡೆಯಲ್ಲಿ ತುರುಕಿಸಿಕೊಳ್ಳಲಿ. ನೀನೀಗ ಹೋಗು."

ನಂದಿನಿ ಗುತ್ತಿಗೆ ಹೊರಳಿದಳು. ಬಂದವಳೇ ಮೂರಿಲೆ ಗಂಧವನ್ನು ಹಲಗೆಯ ಮೇಲಿಟ್ಟಳು. ಬೇಗಬೇಗನೇ ಸಪ್ಪಿನ ಚಟ್ನಿಯನ್ನು ಕಡಿದಳು. ಅನ್ನದ ಬುತ್ತಿಯನ್ನು ಕಟ್ಟಿದಳು. ನಂದನು ಯೋಧೋಚಿತ ಉಡುಗೆತೊಡುಗೆಗಳನ್ನು ಧರಿಸಿದನು. ಬಂಟಕತ್ತಿಯನ್ನು ಸೊಂಟಕ್ಕೆ ಬಿಗಿದುಕೊಂಡನು. ಅತ್ತ ಬಾಗಿಲ ಹಿಂಬದಿಯಲ್ಲಿ ನಿಂತು ನತಮಸ್ತಕಳಾಗಿ ಕಣ್ಣೀರು ಸುರಿಸುತ್ತಿರುವ ತನ್ನ ಪತ್ನಿಯ ಕಡೆಗೆ ಆ ವೀರಬಂಟನು ಕಣ್ಣೆತ್ತಿ ನೋಡಲಾರನು. ಚಾವಡಿಯನ್ನು ತೊರೆದು ಹೊರಡುವುದಕ್ಕೆ ಸನ್ನದ್ಧನಾಗಿದ್ದನು. ಈಗ ಮಾತ್ರ ಅವನ ಹತ್ತಿಕ್ಕಿಕೊಂಡ ಪ್ರೇಮದ ಕಟ್ಟು ಶಿಥಿಲವಾಯಿತೋ ಎನ್ನುವ ಹಾಗೆ ಒಂದು ಕ್ಷಣ ಅವನು ಬಾಗಿಲೆಡೆಗೆ ಮುಖ ತಿರುವಿದನು. ಮತ್ತೆ ಹೆಬ್ಬಾಗಿಲ ಅಂಚಿಗೆ ಮುಂದರಿಯುತ್ತಿದ್ದನಷ್ಟೆ. ಅಷ್ಟರಲ್ಲಿ ಬಾಗಿಲಿನ ಎಡೆಯಿಂದ ನಂದಿನಿಯ ಧ್ವನಿ ಹೊರಡಿತು.

"ಬೂಕು ಇಡುವ ಹಲಗೆಯ ಮೇಲೆ ಮೂರಿಲೆ ಗಂಧವಿದೆ. ಅದನ್ನು ನಿಮ್ಮ ತಲೆ ರುಮಾಲಿನೆಡೆಯಲ್ಲಿ ತುರುಕಿಸಿಕೊಳ್ಳಬಾರದೇ?"

"ಏನು, ನಂದಿನಿ? ನಾನು ಸಮರದಲ್ಲಿ

ಮರಣಹೊಂದಬೇಕೆಂದು ನಿನ್ನ ಆಶಯುವೇ? ಅದಕ್ಕಾಗಿ ನನಗೆ ಗಂಧಪ್ರಸಾದ ನೀಡುತ್ತಿಯಾ?"

"ಅಯ್ಯೋ! ಹಾಗೆ ಹೇಳಬೇಡಿ! ನನ್ನ ಕಿವಿ ಕಿವುಡಾಗಲಿ! ಕಣ್ಣು ಕಿತ್ತುಹೋಗಲಿ! ಮನಸ್ಸಿನಲ್ಲಿ ನೆನೆಯಲಿಲ್ಲ. ಕನಸಿನಲ್ಲಿ ಭಾವಿಸಲಿಲ್ಲ. ನನ್....ನನ್ನ....ನರೇ! ದೇವರ ಗಂಧಪ್ರಸಾದವನ್ನು ತೆಗೆದುಕೊಂಡು ಭಕ್ತಿಯಿಂದ ತಲೆಗೆ ಧರಿಸಿರಿ......."

ನಂದನು ಹಿಂದಕ್ಕೆ ಸರಿದು, ಹೋಗಿ ಹಲಗೆಯ ಮೇಲಿನಿಂದ ಗಂಧವನ್ನು ತೆಗೆದು ತನ್ನ ತಲೆಯ ರುಮಾಲಿನ ಸಂಧಿನಲ್ಲಿ ತುರುಕಿಸಿಕೊಂಡನು. ತರುವಾಯ ಗಂಭೀರವಾದ ಹೆಜ್ಜೆಯನ್ನಿಕ್ಕುತ್ತ ಹೊರ ಹೊರಟು ಬಿಟ್ಟನು.

ನಂದಿನಿ ಹೆಬ್ಬಾಗಿಲಿಗೆ ಬಂದು ತನ್ನ ಪತಿಯ ತಲೆ ತುದಿ ತನ್ನ ಕಣ್ಣಿಗೆ ಮಾಸುವ ಪರ್ಯಂತರ ನಿಂತುಕೊಂಡು ನಿಟ್ಟಿಸಿದಳು.

ಆ ದಿನ ದಾಟಿತು. ಮರುದಿನ ನಂದಿನಿ ನಸುಕಿಗೇ ಎದ್ದಳು. ಗುಡ್ಡದಲ್ಲಿ ಕಣಿ ಹೇಳುವ ಪುರಾಣಿಕರೆಂಬವರಿದ್ದರು. ಕೈಯಲ್ಲಿ ಎರಡು ಬೆಳ್ಳಿಯ ನಾಣ್ಯಗಳನ್ನು ಹಿಡಿದುಕೊಂಡು ಗುಡ್ಡದ ಪುರಾಣಿಕರ ಮನೆಗೆ ಲಗುಬಗೆಯಿಂದ ಸಾಗಿದಳು.

ನಂದಿನಿ ಪುರಾಣಿಕರ ಮನೆಯ ಜಗಲಿಯನ್ನು ಹತ್ತುವಾಗ ಪುರಾಣಿಕರು ಸ್ನಾನಗೃಹಕ್ಕೆ ಹೊರಡುತ್ತಿದ್ದರು. ನಂದಿನಿಯ ಆಕಸ್ಮಿಕ ಬರೋಣದಿಂದ ವಿಸ್ಮಿತರಾದ ಪುರಾಣಿಕರು ವಿಚಾರಿಸಿದರು:

"ಎಲಾ! ಏಕೆ ಬಂದೆ, ಏನು—ನಂದಿನೀ?"

"ನೀವು ಮೀಯುವುದಕ್ಕೆ ಹೊರಟಿರುವಿರೇ? ನನಗೆ ನಿಮಿತ್ತ ಕೇಳಲುಂಟು."

"ಮಿಂದುಬಾರದೆ ರಾಶಿ ಹೇಗೆ ಇಟ್ಟೇನು? ನಿಮಿತ್ತ ನಿನಗೆ ಹೇಗೆ ಹೇಳ್ಳೇನು? ತಡೆ. ಚಾವಡಿಯಲ್ಲಿ ಕೂತುಕೊಳ್ಳು. ಶೀಘ್ರದಲ್ಲಿ ಮಿಂದುಕೊಂಡು ಬಂದುಬಿಡುವೆ."

ಹೀಗೆಂದು ನುಡಿದು ಪುರಾಣಿಕರು ಸ್ನಾನಗೃಹಕ್ಕೆ ತೆರಳಿದರು.

ಸ್ವಲ್ಪ ಹೊತ್ತಿನ ತರುವಾಯ ಮಿಂದು ಶುಚಿರ್ಭೂತರಾಗಿ ಮರಳಿದ ಪುರಾಣಿಕರು, ಚಾವಡಿಯ ನಡುಮಂತರದಲ್ಲಿ ಕವಡಿಗೆಯ ಕಾಲುಗಳನ್ನು ಮತ್ತು ಓಲೆಯ ಪಂಚಾಂಗವನ್ನು ಬಿಡಿಸಿ ನಿಮಿತ್ಯ ಹೇಳುವುದಕ್ಕೆ ಕೂತರು.

"ಕೈಮುಟ್ಟಿ ಕಾಣಿಕೆಯನ್ನಿಡು, ನಂದಿನಿ, ಇಟ್ಟ ರಾಶಿಗೆ ತೋರಿದ ನಿಮಿತ್ತವನ್ನು ನಿನಗೆ ಉಸುರುವೆನು."

ನಂದಿನಿ ಕಾಣಿಕೆ ಇಟ್ಟಳು. ಪುರಾಣಿಕರು ನಿಮಿತ್ಯ ಹೇಳಿದರು:

"ನಿನ್ನ ಗಂಡನು ಉತ್ತರದಲ್ಲಿ ಮುನ್ನುಗ್ಗಿದ ಶತ್ರುಪಡೆಗೆ ಪ್ರತಿಧಾಳಿಯನ್ನು ಕೊಡುತ್ತಿದ್ದಾನೆ. ಶತ್ರುಗಳು ಹಿಮ್ಮೆಟ್ಟುತ್ತಿದ್ದಾರೆ. ನೀನೇನೂ ಭಯಪಡಬೇಕಾಗಿಲ್ಲ. ಒಂದು ವರ್ಷ ಆರು ತಿಂಗಳ ಕಾಲ ನಡೆಯಬಹುದಾದ ಸಂಗ್ರಾಮವನ್ನು ಕೇವಲ ಆರು ತಿಂಗಳ ಅವಧಿಯಲ್ಲೇ ಸಮಾಪ್ತಿಗೊಳಿಸಿ ನಂದನು ವಿಜಯಿಯಾಗಿ ಮರಳುವನು."

ಅಷ್ಟು ಕೇಳಿ ನಂದಿನಿ ಗುಡ್ಡೆಯ ಮನೆಯಿಂದ ಹೊರಟುಬಂದಳು.

ಗುತ್ತಿನ ಮನೆಗೆ ಮರಳಿದ ನಂದಿನಿ ಪುನಃ ಮಧ್ಯಾಹ್ನ ಗುಡ್ಡದ ಪುರಾಣಿಕರ ಮನೆಗೆ ಕೈಯಲ್ಲಿ ನಾಲ್ಕು ಬೆಳ್ಳಿಯ ನಾಣ್ಯಗಳನ್ನು ಹಿಡಿದುಕೊಂಡು ನಡೆದಳು. ಪುರಾಣಿಕರ ಚಾವಡಿಯನ್ನು ಏರಿ ಅವರಿಗೆ ಬೆಸಗೊಂಡಳು:

"ಪುರಾಣಿಕರೇ, ರಾಶಿ ಇಡಿರಿ. ಮರಳಿ ನಿಮಿತ್ತ ಹೇಳಿರಿ."

"ಅರೇ! ನಿನ್ನ ಹುಚ್ಚುತನಕ್ಕೆ ಏನೆನ್ನಲಿ? ಆಗತಾನೇ ಬೆಳಿಗ್ಗೆ ಬಂದು ನಿಮಿತ್ಯ ಕೇಳಿ ಹೋದೆಯಲ್ಲಾ? ಪುನಃ ಮಧ್ಯಾಹ್ನದ ನಡುಬಿಸಿಲಿಗೆ ಬಂದು ನಿಮಿತ್ಯ ಹೇಳಬೇಕೆನ್ನುವೆಯಲ್ಲಾ! ನಾನು ನಿಮಿತ್ಯ ಹೇಳಲಾರೆ."

"ಬಂದುದಕ್ಕೆ ಒಂದು ಸಲ ನನಗೆ ನಿಮಿತ್ಯ ಹೇಳಿರಿ. ನಾಳೆ ನಾನು ಬರುವುದಿಲ್ಲ. ಪುರಾಣಿಕರೇ, ದಯಮಾಡಿ ಈಗೊಮ್ಮೆ ಹೇಳಿರಿ."

"ಕೈಮುಟ್ಟಿ ಕಾಣಿಕೆ ಇಡು."

ಇಟ್ಟ ರಾಶಿಗೆ ಪುರಾಣಿಕರು ನಿಮಿತ್ಯ ಹೇಳಿದರು:

"ಪ್ರಥಮವಾಗಿ ಕೊಟ್ಟ ಕಾಳಗದಲ್ಲಿ ವಿಜಯವನ್ನು ಗಳಿಸಿ ದ್ವಿತೀಯ ರಂಗಕ್ಕೆ ದಳಕಟ್ಟಿ ನಿನ್ನ ಪತಿಯು ವೈರಿಪಕ್ಷದ್ದವರನ್ನು ಇದಿರಿಸುತ್ತಿದ್ದಾನೆ."

"ಹಾಗಾದರೆ ನಾನು ಸಂಜೆಗೆ ಬರುತ್ತೇನೆ. ನನಗೆ ಮತ್ತೆ ರಾಶಿ ಇಟ್ಟು ನಿಮಿತ್ಯ ಹೇಳಿರಿ."

"ಈವತ್ತು ಸಂಜೆಗೆ ಬರಬೇಡ. ನಾಳೆ ಬೆಳಿಗ್ಗೆ ಬಾ. ಬೆಳ್ಳಿಯ ನಾಣ್ಯಗಳನ್ನು ತಂದರೆ ನಿಮಿತ್ಯ ಹೇಳಲಾರೆ. ಚಿನ್ನದ ನಾಣ್ಯಗಳನ್ನು ಹಿಡದುಕೊಂಡು ಬಾ."

ನಂದಿನಿ ಹೊರಟುಹೋದಳು. ಮರುದಿನ ಮುಂಜಾನೆ ಗುಡ್ಡದ ಪುರಾಣಿಕರ ಮನೆಗೆ ಬಂದಳು.

"ಕೈಮುಟ್ಟಿ ಚಿನ್ನದ ನಾಣ್ಯಗಳನ್ನು ಕಾಣಿಕೆ ಇಡುತ್ತೇನೆ. ನಿಮಿತ್ಯ ನುಡಿಯಿರಿ, ಪುರಾಣಿಕರೇ."

ತಲೆಗೆ ಮೈಗೆ ಮಿಂದುಕೊಂಡು ಬಂದ ಪುರಾಣಿಕರು ಚಾವಡಿಯಲ್ಲಿ ಕವಡಿಗೆ, ಪಂಚಾಂಗಗಳನ್ನು ಬಿಡಿಸಿ ನಿಮಿತ್ಯ ನುಡಿದರು:

"ನಿನ್ನೆ ಸಂಜೆಯ ಕಾಳಗವನ್ನು ಗೆದ್ದು ನಿನ್ನ ಗಂಡನು ಈವತ್ತಿನ ಮುಂಜಾನೆಯ ಸಮರಕ್ಕೆ ವ್ಯೂಹವನ್ನು ರಚಿಸಿ ಶತ್ರುಪಡೆಯ ಮೇಲೆ ಪರಾಕ್ರಮಣವನ್ನು ಕೈಕೊಂಡಿದ್ದಾನೆ. ಅವನು ಬೇಗನೇ ಅಪ್ರತಿಮ ವಿಜಯವನ್ನು ಗಳಿಸಿ ಹಿಂತಿರುಗುತ್ತಾನೆ."

"ಹಾಗಾದರೆ, ನಾನು ಈಗ ಹೋಗುತ್ತೇನೆ. ಮಧ್ಯಾಹ್ನದ ಹೊತ್ತಿಗೆ ಬರುತ್ತೇನೆ ಆಗ ಪುನಃ ನಿಮಿತ್ಯ ಹೇಳುವಿರಾ?"

"ಏನು, ನಂದಿನಿ—ಮೇಲ್‌ಬಂಗಾಡಿ ಗುತ್ತಿನಲ್ಲಿ ಹಣದ ಕೊಪ್ಪರಿಗೆ ಉಂಟೇ? ಅದನ್ನೆಲ್ಲಾ ತಂದು ಈ ಗುಡ್ಡೆಯ ಮನೆಯಲ್ಲಿ ತುಂಬಿಸುತ್ತಿಯಾ? ಇನ್ನುಮೇಲೆ ನೀನು ಬಂದರೆ ನಿನಗೆ ನಾನು ರಾಶಿ ಇಟ್ಟು ನಿಮಿತ್ಯ ಹೇಳಲಿಕ್ಕಿಲ್ಲ."

"ಮಧ್ಯಾಹ್ನದ ಹೊತ್ತಿಗೆ ನಾನು ಬಂದವಳು ನಿಮಗೆ ಒಂದು ಕಳಸಿಗೆ ತುಂಬ ಲಪ್ಪ ಹಣವನ್ನು ಕೊಡುತ್ತೇನೆ."

"ಹೂಂ! ನೋಡ್ಡೋಣ."

ಅಷ್ಟು ಕೇಳಿ, ಮಾಪಾಸು ಬಂದಳು. ಗುತ್ತಿನ ಮನೆಗೆ ಬಂದವಳೇ ಒಂದು ಕಳಸಿಗೆ ನಾಣ್ಯಗಳನ್ನು ಅಳಿದು ತೆಗೆದಿಟ್ಟಳು. ಮಧ್ಯಾಹ್ನ ಹೊತ್ತಿಗೆ ಸರಿಯಾಗಿ ಆ ಒಂದು ಕಳಸಿಗೆ ಹಣವನ್ನು ಎತ್ತಿಕೊಂಡು ಗುಡ್ಡದ ಮನೆಗೆ ನಡೆದಳು.

ಚಾವಡಿಯ ನಡಂತರದಲ್ಲಿ ಕುಳಿತಿದ್ದ ಪುರಾಣಿಕರಿಗೆ ತಾನು ತಂದ ಒಂದು ಕಳಸಿಗೆ ಹಣವನ್ನು ಒಪ್ಪಿಸಿದಳು. ಹಣದ ರಾಶಿಯನ್ನು ಕಂಡು ಪುರಾಣಿಕರಿಗೆ ಬಲು ಆನಂದವಾಯಿತು.

"ಏನು, ನಂದಿನಿ—ನೀನು ಹಟಹಟ್ಟಿ ನನ್ನನ್ನು ಹೆಜ್ಜೆ ಹೆಜ್ಜೆಗೂ ಕಾಡಿಸುತ್ತಿರುತ್ತೀಯಲ್ಲಾ! ನೀನು ನನ್ನನ್ನು ಉಣ್ಣುವುದಕ್ಕೂ ಬಿಡುತ್ತಿಲ್ಲ. ಉಂಡರೆ ಕೈಯ್ಯ ಪಸೆ ಆರಗೊಡುವುದಿಲ್ಲ. ಮತ್ತೆ ಕೊಂಚ ಕೂತು ವೀಳ್ಯ ಹಾಕೋಣವೆಂದರೆ ಅದಕ್ಕೂ ನೀನು ಬಿಡುವುದಿಲ್ಲ."

ನಂದಿನಿ ಪುರಾಣಿಕರ ಆ ಉತ್ಪ್ರೇಕ್ಷೆಯ ಮಾತಿಗೆ ಕಿವಿಕೊಟ್ಟಂತಿರಲಿಲ್ಲ. ಅವಳ ಕಣ್ಣೋಟ ನಿಮಿತ್ಯಗಾರರಾದ ಪುರಾಣಿಕರ ಮುಂದೆ ಬಿಡಿಸಿಟ್ಟಿರುವ ಕವಡಿಗೆಗಳ ಮೇಲೈಕತದಾತ್ಮಕವಾಗಿತ್ತು.

ಪುರಾಣಿಕರು ಇಟ್ಟ ರಾಶಿಗೆ ಗುಣಿಸಿ ಭಾಗಿಸಿ ನಿಮಿತ್ಯವನ್ನೊರೆದರು:

"ನಿನ್ನ ಗಂಡನು ಮುಂಜಾನೆಯ ಬವರದಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸಿದನಲ್ಲದೆ, ನಾಲ್ಕು ಮೂಲೆಯಿಂದ ನುಗ್ಗಿದ ಅರಿಸೇನೆಗಳನ್ನು ಕೂಡ ಬಗ್ಗುಬಡಿದು ಮೇಲ್ಗೈಯಾಗಿದ್ದಾನೆ."

ಪುರಾಣಿಕರ ಯಾವತ್ತು ನಿಮಿತ್ಯವು ಅಥವಾ ಧೈರ್ಯೋಕ್ತಿಯು ನಂದಿನಿಯ ಮನೋದ್ವೇಗವನ್ನು ಸಾಂತ್ವನಗೊಳಿಸದಾಯಿತು. ಪತಿ ಮೇಲಿನ ಕಾತರತೆ ಕ್ಷಣಕ್ಷಣಕ್ಕೂ ಉಲ್ಬಣಗೊಂಡಿತು. ಪರಿಣಾಮವಾಗಿ ಆರು ದಿವಸಗಳು ಕಳೆಯುವುದರೊಳಗಾಗಿ ಮೇಲ್‌ಬಂಗಾಡಿ ಗುತ್ತಿನ ಮನೆಯ ಧನಕನಕ, ಧಾನ್ಯದ ಕಣಜ, ಪಾತ್ರೆ ಭಾಜನಗಳು ಬರಿದಾದುವು. ಹಟ್ಟಿಯಲ್ಲಿದ್ದ ದನಕರುಗಳು ಮಾಯವಾದುವು. ಮೂಗುತಿಯೊಂದನ್ನುಳಿದು ಚಿನ್ನದ ಸರಗಳಿಂದ ಕಿವಿಯ ಓಲೆ ವರೆಗಿನ ಸರ್ವ ಚಿನ್ನಾಭರಣಗಳು ಪುರಾಣಿಕರ ಬೊಕ್ಕಸಕ್ಕೆ ಹೋಗಿ ತುಂಬಿಕೊಂಡವು.

ಮರುದಿನ ಬೆಳಿಗ್ಗೆ ನಂದಿನಿ ಮೂಗಿನ ಮೂಗುತಿ ಕಳಚಿ, ಅದನ್ನು ಹಿಡಿದುಕೊಂಡು ಗುಡ್ಡದ ಪುರಾಣಿಕರ ಮನೆಗೆ ಬಂದಳು. ನಂದಿನಿ ಪ್ರಶ್ನೆ ಕೇಳುವುದಕ್ಕೆ ತನ್ನ ಮೂಗುತಿಯನ್ನು ಕಾಣಿಕೆ ಇಟ್ಟಾಗ, ಸಹನೆಗೆಟ್ಟು ದುರುಗುಟ್ಟಿ ನೋಡುತ್ತ ಪುರಾಣಿಕರು ಕವಡೆಗಳನ್ನು ಬೆರಳಿನಿಂದ ಒಂದು ಸಲ ಆಚೆ ಈಚೆ ಸರಿಸಿದರು. ಧ್ವನಿಯೇರಿಸಿ ಈ ರೀತಿಯ ದುರ್ನಿಮಿತ್ಯವನ್ನು ನಂದಿನಿಗೆ ಘೋಷಿಸಿದರು:

"ನಿನ್ನ ಗಂಡನಾದ ನಂದನು ಒಂದು ವರ್ಷ ಆರು ತಿಂಗಳ ಸೈನ್ಯ ಕಾರ್ಯಾಚರಣೆಯನ್ನು ಬರೇ ಆರು ದಿವಸಗಳಲ್ಲಿ ತೀರಿಸಿ, ವಿಜಯೋನ್ಮುಖನಾಗಿ ಹಿಂತಿರುಗುವ ಕಾಲದಲ್ಲಿ ನೀನು ನಿನ್ನ ಮೂಗಿನಿಂದ ಮೂಗುತಿಯನ್ನು ಕಳಚಿಬಿಟ್ಟೆ! ನೀನು ಮೂಗಿನಿಂದ ಮೂಗುತಿ ಕಳಚಿದ ವಿಷಮ ಘಳಿಗೆಯಲ್ಲಿ ನಿನ್ನ ಗಂಡನು ಇದ್ದಕ್ಕಿದ್ದ ಹಾಗೆ ದಾರಿಯಲ್ಲಿ ಕುಹಕಿಗಳಿಂದ ಕೊಲ್ಲಲ್ಪಟ್ಟನು."

"ಹಾಯ್! ಕೊನೆಗೆ ಹೀಗಾಗಬೇಕೇ? ನನ್ನ ಬದುಕು ಭಾಗ್ಯ....ಅಯ್ಯೋ!........ ಅಯ್ಯೋ!!...." ನಂದಿನಿಯ ಪ್ರಲಾಪ!

ಕುಮಾರ ಉಮ್ಮಣ ನಂದನು ಯುದ್ಧ ಕಾರ್ಯಾಚರಣೆಯನ್ನು ತೀರಿಸಿ ವಿಜಯದ ಹುಮ್ಮಸ್ಸಿನಿಂದ ಪ್ರೇರಿತನಾಗಿ ತನ್ನ ಮೇಲ್‌ಬಂಗಾಡಿಯ ಗುತ್ತಿನ ಮನೆಗೆ ಮರಳುತ್ತಿದ್ದನು. ತನ್ನ ಪ್ರಿಯೆಯನ್ನು ಕಾಣುವ ತವಕ ಅವನ ಮನೋಸಾಗರದಲ್ಲಿ ತರಂಗಮಾಲೆಯಾಗಿ ನೊರೆಹೊಮ್ಮುತ್ತಿದೆ.

ನಂದನು ಹುಲ್ಲುಗಾಡಿನ ಪಕ್ಕದಲ್ಲಿ ಒತ್ತರದಿಂದ ಬರುತ್ತಿರುವಾಗ, ಅಲ್ಲಿ ದನ ಮೇಯಿಸುವ ಹುಡುಗರು ಹೀಗೆಂದು ತಮ್ಮಷ್ಟಕ್ಕೆ ಮಾತನಾಡಿಕೊಳ್ಳುತ್ತಿದ್ದರು:

"ಮೇಲ್‌ಬಂಗಾಡಿ ಗುತ್ತಿನ ಕುಮಾರ ಉಮ್ಮಣ ನಂದರು ಕಾಳಗದಲ್ಲಿ ಮಡಿದರೆಂಬ ಸುದ್ದಿ ನಾಲ್ಕು ಮೈಗಳಲ್ಲಿ ಹಬ್ಬಿದೆ. ನಂದಿನಿ ಕರೀಮಣಿ, ಮೂಗುತಿ ಕಿತ್ತುಕೊಂಡು ಕಪ್ಪುಬಟ್ಟೆ ಮುಸುಕೆಳೆದು ರೋದಿಸುತ್ತ ಕೂತಿದ್ದಾಳೆ."

ನಂದನಿಗೆ ಈ ವಿಲಕ್ಷಣ ಮಾತನ್ನು ಕೇಳಿದಾಕ್ಷಣ ಅವನ ಜಂಘಾಬಲವೇ ಮುರುಟಿಕೊಂಡಂತಾಯಿತು. ಕಳವಳ ಮತ್ತು ವಿಸ್ಮಯಗಳಿಂದ ನಿಷ್ಪಂದನಾಗಿ ಹುಡುಗರ ಮಧ್ಯಕ್ಕೆ ಸರಿದನು. ಅವರನ್ನು ಈ ರೀತಿ ಪ್ರಶ್ನಿಸಿದನು.

"ಹುಡುಗರೇ! ನಿಮಗೆ, ನಂದರು ಕಾಳಗದಲ್ಲಿ ಮರಣವಾದರೆಂದು ಯಾರು ಹೇಳಿದರು? ನಡೆದುದಾದರೂ ಏನು? ಕೊಂಚ ವಿವರವಾಗಿ ತಿಳಿಸುವಿರಾ?"

ಯೋಧನಾಯಕನಾದ ನಂದನು ಪ್ರತ್ಯಕ್ಷವಾಗಿ ತಮ್ಮ ಇದಿರಿಗೆ ಬಂದುಕೊಂಡುದನ್ನು ಕಂಡು ಹುಡುಗರು ಮೊದಲು ಅಪ್ರತಿಭರಾದರೂ, ತರುವಾಯ ಸಾವರಿಸಿ ಈ ರೀತಿಯಾಗಿ ಉತ್ತರಿಸಿದರು:

"ಗುಡ್ಡದ ಪುರಾಣಿಕರ ನಿಮಿತ್ಯ ಕೇಳಿ, ಅವರ ಮನೆಯಿಂದ ಕರೀಮಣಿ, ಮೂಗುತಿ ಕಿತ್ತುಕೊಂಡು ರೋದಿಸುತ್ತ

ಹಿಂತಿರುಗುತ್ತಿದ್ದ ನಂದಿನಿಯವರನ್ನು ನಾವು ವಿಚಾರಿಸಿದೆವು. ಹಾಗಾಗಿ ನಮಗೆ ಗೊತ್ತು."

ನಂದನು ಒಡನೇ ಮೇಲ್‌ಬಂಗಾಡಿ ಗುತ್ತಿಗೆ ಧಾವಿಸಿದನು. ಮನೆಯ ಚಾವಡಿ ಹತ್ತಿದನು. ಗಟ್ಟಿಸಿ ಕರೆದನು:

"ನಂದಿನೀ! ನಂದಿನೀ!"

ನಿರುತ್ತರ! ಒಳಗೆ ಪ್ರವೇಶಿಸಿದನು. ಬೆಳಕಿನ ಕೊಠಡಿಗೆ ದಿಟ್ಟಿಸಿ ಕತ್ತಲೆಯ ಕೊಠಡಿಗೆ ಕಾಲನ್ನಿಕ್ಕಿ ಸರಿದನು.

"ನಂದಿನೀ! ನಂದಿನೀ!"

ಪುನಃ ಉತ್ತರವಿಲ್ಲ. ಮುಂದೆ ಸರಿಯುವಾಗ ಅವನ ಬಲದಕಾಲಿನ ಉಂಗುಷ್ಠ, ನೆಲದ ಮೇಲೆ ಬಿದ್ದುಕೊಂಡು ಕಣ್ಣೀರಿಕ್ಕುತ್ತಿರುವ ನಂದಿನಿಯ ತಲೆ ತುದಿಗೆ ಎಡವಿತು.

"ಏನು, ನಂದಿನೀ? ನಾನು ದಂಡಿಗೆ ಹೋಗಿ "ಸಮರ" (ಮರಣ) ಹೊಂದಲಿಲ್ಲವೆಂದು ನೀನು ದುಃಖಿಸುತ್ತಿರುವುದೇ?"

ದೀಪ ಹೊತ್ತಿಸಿ ಅವಳ ಮುಖದ ಕಡೆಗೆ ನಿಟ್ಟಿಸಿದನು.

"ನಂದಿನೀ, ನಮ್ಮ ಈ ವರೆಗಿನ ನಡೆವಳಿಕೆ — ನಾನು ಒಳಗೆ ಹೋಗುವಾಗ ನೀನು ಹೊರಗೆ ಬರುತ್ತಿದ್ದಿ, ನಾನು ಹೊರಗೆ ಹೋಗುವಾಗ ನೀನು ಒಳಗೆ ಸರಿಯುತ್ತಿದ್ದಿ — ನಿನ್ನ ಮುಖವನ್ನು ನಾನು ಕಣ್ಣೆತ್ತಿ ಅಪೂಟವಾಗಿ ಇದೇ ಈಗ ನೋಡುತ್ತಿದ್ದೇನೆ!"

ನಂದಿನಿಯ ಮೂಗಿನಲ್ಲಿ ನತ್ತು ಮತ್ತು ಕೊರಳಲ್ಲಿ ಕರಿಮಣಿಗಳು ಶೂನ್ಯವಾಗಿರುವುದನ್ನು ಕಂಡುಕೊಂಡು ನಂದನು ಮತ್ತೆ ಗುರುಗುರುಸಿದನು:

"ನಾನು ಯುದ್ಧದಲ್ಲಿ ಮಡಿದೆನೆಂದು ಕೊಂಡು ಮೊದಲೇ ಮೂಗುತಿ ಕರೀಮಣಿಗಳನ್ನು ಕಿತ್ತುಕೊಂಡಿದ್ದಿಯಾ?"

ತನ್ನ ಪತಿಯ ಆಗಮನದ ಆನಂದವನ್ನು ಹೊರಗೆ ಪ್ರದರ್ಶಿಸಿಕೊಳ್ಳುವಷ್ಟಕ್ಕೆ ನಂದಿನಿಗೆ ನೈತಿಕ ವ್ಯವಧಾನ ಇಲ್ಲವಾಯಿತು. ಮೂಗುತಿ, ಕರೀಮಣಿಗಳು ಸ್ತ್ರೀಯ ಮುತ್ತೈದೆತನದ ಮಂಗಲಕರ ಸಂಕೇತವು! ಸುಮಂಗಲಿಯೊಬ್ಬಳು ವಿವೇಚನಾಶೂನ್ಯಳಾಗಿ ಅವುಗಳನ್ನು ಕಳಚಿಕೊಂಡಳೆಂದರೆ, ಅವಳು ಅಷ್ಟು ಕಠಿಣಮನಸ್ಕಳೆಂದು ವಿದಿತ. ಪತಿಯ ಮೇಲಿನ ಪ್ರೇಮೋದ್ವೇಗ ಅರ್ಥಾತ್ ಅತೀ ಮೈತ್ರಿಯು ನಂದಿನಿಯನ್ನು ಅಂಥ ಶ್ರದ್ಧೆಗೆ ಸೆಳೆಯಿತು. ವಿವೇಕ ಭ್ರಷ್ಟಳಾಗಿ ನಂದಿನಿ ಅಸಂಗತವನ್ನೆಸಗಿದ್ದಳು. ಪತಿಯ ಮುಂದೆ ನಂದಿನಿ ಅಪರಾಧಿನಿ! ಅವಳು ಮತ್ತೆ ಪತಿಯ ಮುಖವನ್ನು ತಲೆ ಎತ್ತಿ ನಿರುಕಿಸುವಳೆಂತು? ಆದರೆ, ಪತಿಯು ಕೊನೆಗೆ ಈಗತಾನೇ ಮಾಡಿದ ಆರೋಪವು, ನಂದಿನಿಯ ಹೃದಯಾಂತರಾಳದ ವಿಶಿಷ್ಟತೆಯೊಂದನ್ನು ಕೆರಳಿಸುವಂತಿತ್ತು. ನಂದಿನಿ ತಡೆಯದಾದಳು. ಅಶ್ರುಪೂರಿತನೇತ್ರೆಯಾಗಿ ಆಕೆ ಈ ರೀತಿಯಾಗಿ ಪತಿಗೆ ನಿವೇದಿಸಿಕೊಂಡಳು:

"ಮದುಮಗ! ಕಲೆ ಇಲ್ಲದ ಮೈಗೆ ಕಲೆಹಾಕಬೇಡಿ. ನೀವು ಕಾಳಗದ ಕಣಕ್ಕೆ ಬೆನ್ನುತಿರುಗಿಸಿ ಹೋದಕೂಡಲೇ ನಾನು ಗುಡ್ಡದ ಪುರಾಣಿಕರ ಬಳಿಗೆ ಧಾವಿಸಿದೆನು. ಅವರಲ್ಲಿ ನೋಟನಿಮಿತ್ತದಲ್ಲಿ ಕೇಳಿದೆನು. ನಿಮ್ಮ ತಲೆತುದಿ ಮಾಸಿದ ಅವಧಿಯಿಂದ ಶುರುಹಚ್ಚಿದ ನಾನು ಈ ದಿನದ ವರೆಗೂ ನೋಟನಿಮಿತ್ತದಲ್ಲಿ ಕೇಳುತ್ತಲೇ ಬಂದೆನು."

ಅಷ್ಟು ಕೇಳಿದ ನಂದನು ಚಾವಡಿಗೆ ಬಂದನು. ಅವನನ್ನನುಸರಿಸಿ ನಂದಿನಿಯೂ ಬಂದಳು. ನಂದನು ಮನೆಯ ಮುಂದಿರುವ ಹಟ್ಟಿಯನ್ನು ಈಕ್ಷಿಸುತ್ತ ಕುತೂಹಲಾಶ್ಚರ್ಯದಿಂದ ಕೇಳಿದನು:

"ನಮ್ಮ ಹಟ್ಟಿಯೊಳಗಿದ್ದ ದನಕರುಗಳು ಏನಾದವು?"

"ಹಟ್ಟಿಯೊಳಗಿದ್ದ ದನಕರುಗಳು ಗುಡ್ಡದ ಪುರಾಣಿಕರ ಮನೆಯಲ್ಲಿವೆ. ಮನೆಯಲ್ಲಿ ಹಣದ ತಟ್ಟಿಯಾಗಿಕೊಂಡುದರಿಂದ ದನಕರುಗಳನ್ನು ಅವರಿಗೆ ಕೊಟ್ಟೆನು. ಮತ್ತೆ ಅದು ಕೂಡ ಸಾಕಾಗದೆ ಹೋದಾಗ ಮೈಯಲ್ಲಿದ್ದ ಚಿನ್ನಾಭರಣಗಳನ್ನು ತೆಗೆದೆನು. ಮೈಯ ಚಿನ್ನಾಭರಣಗಳನ್ನು ಕೊಟ್ಟು ಬರಿದು ಮಾಡಿದ ಮೇಲೆ, ಮನೆಯ ಪಾತ್ರೆ ಭಾಜನಗಳನ್ನು ಕೊಂಡುಹೋದೆನು. ಎಲ್ಲಾ ಕೊಟ್ಟು ಮುಗಿದ ಮೇಲೆ ಮೂಗಿನ ಮೂಗುತಿಯನ್ನು ಕಾಣಿಕೆ ಇಟ್ಟು ನಿಮಿತ್ತ ಕೇಳಿದೆನು. ಮೂಗುತಿ ಇಟ್ಟ ಘಳಿಗೆಯಲ್ಲಿ ಪುರಾಣಿಕರು—'ನಿನ್ನ ಗಂಡನು ಕಾಳಗದಲ್ಲಿ ಜಯಶಾಲಿಯಾಗಿ ಮರಳುವ ಕಾಲದಲ್ಲಿ ನೀನು ಮೂಗುತಿ ಕಳಚಿಬಿಟ್ಟೆ. ಈ ವಿಷಮ ಘಳಿಗೆಯಲ್ಲಿ ನಿನ್ನ ಪತಿಯು ದಾರಿಯಲ್ಲಿ ಕುಹಕಿಗಳಿಂದ ಕೊಲ್ಲಲ್ಪಟ್ಟನು' ಎಂಬ ಭಯಾನಕ ನಿಮಿತ್ತ ಪ್ರಕಟಿಸಿದರು. ಅಷ್ಟು ಕೇಳಿದ ನಾನು ಖಿನ್ನಳಾಗಿ ಮನೆ ಸೇರಿದೆನು. ನನ್ನ ಪಾಡಿಗೆ ನೆಲದಲ್ಲಿ ಅಂಗತ್ತನೇ ಬಿದ್ದು ವಿಲಪಿಸುತ್ತಲಿದ್ದೆನು. ಅಷ್ಟರಲ್ಲಿ ನನ್ನ ಆರಾಧ್ಯದೇವರ ದರ್ಶನವಾಯಿತು."

"ಸ್ತ್ರೀ ಬುದ್ಧಿ ಮೊಣಕಾಲ ಕೆಳಗೆ. ಸ್ತ್ರೀ ಬುದ್ಧಿ ಚಂಚಲ, ಪ್ರಳಯಾಂತಕವೂ ಸಹಜ. ಮುಗ್ಧ ಹೆಣ್ಣೇ! ನಿನ್ನ ಅವಿವೇಕವನ್ನೇನೆನ್ನಲಿ? ನಡಿ! ಬಟ್ಟೆ ಉಟ್ಟುಕೋ. ಪುರಾಣಿಕರ ಮನೆಗೆ ಹೋಗೋಣ."

"ನಾನು ಹೇಗೆ ಬರಲಿ? ನನ್ನ ಮೂಗಿನಲ್ಲಿ ಮೂಗುತಿ ಇಲ್ಲ, ಕೊರಳಲ್ಲಿ ಕರೀಮಣಿ ಇಲ್ಲ. ಯಾರಾದರೂ ನನ್ನನ್ನು ನೋಡಿ ಅಪಹಾಸ್ಯಗೈಯ್ಯಲಿಕ್ಕಿಲ್ಲವೇ?"

"ನೀನು ಪುರಾಣಿಕರ ಮನೆಯಿಂದ ಹೇಗೆ ಬಂದೆ? ಹಾಗೇ ನನ್ನ ಜತೆಯಲ್ಲಿ ಹೊರಟು ಬಾ."

ಇಬ್ಬರೂ ಪುರಾಣಿಕರ ಗುಡ್ಡದ ಮನೆಗೆ ನಡೆದರು.

ದಂಪತಿಗಳಿಬ್ಬರೂ ಪುರಾಣಿಕರ ಮನೆಯನ್ನು ಹೊಕ್ಕಾಗ, ಪುರಾಣಿಕರು ಮಧ್ಯಾಹ್ನದ ಮಹಾಪೂಜೆಗೆ ಮಿಂದು, ಮೈಯೊರಸಿಕೊಳ್ಳುತಿದ್ದರು. ಪುರಾಣಿಕರು ದಡದಡನೇ ಮುಂದೆ ಬಂದು ನಂದನನ್ನುದ್ದೇಶಿಸಿ ಈ ರೀತಿ ಸ್ವಾಗತಿಸಿದರು:

"ಹೋ ದಂಡನಾಯಕರಾದ ನಂದರು! ಬನ್ನಿ ಕೂತುಕೊಳ್ಳಿರಿ!"

ಸತಿಪತಿಯರನ್ನು ಉಚಿತಾಸನಗಳಲ್ಲಿ ಕೂತುಕೊಳ್ಳಿಸಿ ಮತ್ತೆ ಪುರಾಣಿಕರು ಹೀಗೆ ನುಡಿದರು:

"ನಂದನವರೇ! ನೀವು ಯಾತಕ್ಕಾಗಿ ಬಂದಿರೆನ್ನುವ ಅಂಶ ನನಗೆ ಮನವರಿಕೆಯಾಗಿದೆ. ನೀವು ಮಾತನಾಡುವುದಕ್ಕೆ ಮುಂದಾಗಿ ನಾನು ನಿಮಗೆ ಅರಿಕೆಮಾಡಿಕೊಳ್ಳುವಂತಹ ವಿಷಯವಿರುತ್ತದೆ. ಆ ಮೇಲೆ ತಾವು ಧಾರಾಳ ಮಾತನಾಡುವಿರಂತೆ."

"ಏನು ನಿಮ್ಮ ವಿಷಯ? ಹೇಳಿರಿ, ಪುರಾಣಿಕರೇ."

ಪುರಾಣಿಕರು ಆಖ್ಯಾನಿಸಿದರು:

"ನೀವು ಕಾಳಗಕ್ಕೆ ಹೊರಟುಹೋದ ದಿವಸ ಬೆಳಿಗ್ಗೆ ಎರಡು ಬೆಳ್ಳಿಯ ನಾಣ್ಯಗಳನ್ನು ಹಿಡಿದುಕೊಂಡು ನಂದಿನಿ ಪ್ರಶ್ನೆ ಕೇಳುವುದಕ್ಕೆ ಇಲ್ಲಿಗೆ ಬಂದಳು. ನನ್ನನ್ನು — ಉಣ್ಣುವವನನ್ನು — ಉಣ್ಣುವುದಕ್ಕೆ ಬಿಡಲೊಲ್ಲಳು. ಉಂಡ ಹುಮ್ಮಸಕ್ಕೆ ವೀಳ್ಯಹಾಕಲಿಕ್ಕೆ ವೇಳೆಕೊಡಳು. ಕೊನೆಯ ನಿಮಿತ್ತದಲ್ಲಿ ನೀವು ವಿಜೇತರಾಗಿ ಯುದ್ಧದಿಂದ ಮರಳುವಾಗ ಕೊಲ್ಲಲ್ಪಟ್ಟರೆಂದು ನಾನು ಹೇಳಿದ್ದು ಖರೆ. ಪ್ರಶ್ನೆ ಕೇಳುವುದಕ್ಕಾಗಿ ತನ್ನ ಕರೀಮಣಿ, ಮೂಗುತಿ ಕಳಚಿಡುವಷ್ಟು ಮುಗ್ಧತನದ ಸ್ತ್ರೀಗೆ ಮತ್ತೆ ಹೇಗೆ ನಾನು ಬುದ್ಧಿ ಕಲಿಸಬೇಕು? ನೀವು ಕೊಲ್ಲಲ್ಪಟ್ಟರೆಂದರೆ ಮತ್ತೇನಲ್ಲ; ಅವಳ ಪಾಲಿಗೆ ಅವಳು ನಿಮ್ಮನ್ನು ಅಳಿಸಿಕೊಂಡಳೆಂಬ ತಾತ್ಪರ್ಯವಷ್ಟೆ. ನಂದರೇ, ನಿಮ್ಮ ಮನೆಯ ದನಕರು, ಪಾತ್ರೆಭಾಜನ, ಚಿನ್ನಾಭರಣ, ದುಡ್ಡುದುಗ್ಗಾಣಿಗಳನ್ನೆಲ್ಲ ಕಾಯ್ದಿಟ್ಟಿದ್ದೇನೆ. ಇವನ್ನೆಲ್ಲಾ ಚಂದದಿಂದಲೇ ನೀವು ಹೋಗುವಾಗ ಒಯ್ದುಕೊಂಡು ಹೋಗಿರಿ."

ನಂದನು ಮತ್ತೆ ಪ್ರತಿಯಾಗಿ ಪುರಾಣಿಕರಿಗೆ ಏನನ್ನೂ ಮಾತನಾಡಲಿಲ್ಲ. ಪುರಾಣಿಕರು ಚಾವಡಿಯ ಮಧ್ಯದಲ್ಲಿ ಎಲ್ಲಾ ಒಡವೆಗಳನ್ನು ತಂದಿರಿಸಿದರು.

ನಂದನು ಕರೀಮಣಿ ಮತ್ತು ಮೂಗುತಿಗಳನ್ನು ನಂದಿನಿಯಿಂದ ಎತ್ತಿ ತೆಗಿಸಿ, ಅವುಗಳನ್ನು ಪುನಃ ಅವಳ ಕೈಯಿಂದಲೇ ಅವಳಿಗೆ ತೊಡಿಸಿದನು. ಒಡವೆಸಾಮಾಗ್ರಿಗಳನ್ನೆಲ್ಲ ನಂದಿನಿಯ ತಲೆಯ ಮೇಲೆ ಹೊರಿಸಿ ಅವಳಿಂದಲೇ ತನ್ನ ಮೇಲ್‌ಬಂಗಾಡಿ ಗುತ್ತಿನ ಮನೆಗೆ ಸಾಗಿಸಿದನು ಮತ್ತು ದನಕರುಗಳನ್ನು ಅಟ್ಟಿಸಿದನು.

ನಂದನು ಆ ಮೇಲೆ ತನ್ನ ಮಾವ ಸುರಪುರರನ್ನು ಕಾಣುವುದಕ್ಕೆ ಅವರ ಸುರಲಡಿ ಬೀಡಿಗೆ ತೆರಳಿದನು. ಮನೆಗೆ ಬಂದ ತನ್ನ ಅಳಿಯನನ್ನು ಸುರಪುರು ಅತ್ಯಂತ ಪ್ರೀತ್ಯಾದರದಿಂದ ಅಪ್ಪಿಕೊಂಡರು. ತನ್ನ ಅಳಿಯನು ದಂಡನಾಯಕನಾಗಿ ಹೋಗಿ ಸಮರವಿಜೇತನಾಗಿ ಹಿಂತಿರುಗಿದ ಪ್ರಸಂಗವು ಅಪಹಾಸ್ಯಗೈದಂತಹ ಊರಿನ ಯುವಜನರಿಗೆ ಛೀಮಾರಿ ಹಾಕಿ ಅವರ ಮುಖಭಂಗವನ್ನು ಮಾಡಿತ್ತು.

ತೂಗುಯ್ಯಾಲೆಯಲ್ಲಿ ನಂದನನ್ನು ಜತೆಯಲ್ಲಿ ಕೂತುಕೊಳ್ಳಿಸಿ, ಅವನ ಧೀರೋದಾತ್ತ ಸಮರನೈಪುಣ್ಯದ ಪ್ರಶಂಸೆಯನ್ನು ಮಾಡುತ್ತಿದ್ದ ಮಾವನವರಿಗೆ ನಂದನು, ತಟ್ಟನೇ ಎದ್ದು ನಿಂತುಕೊಂಡು ಹೀಗೆ ನುಡಿದನು:

"ಮಾವನವರೇ, ನನ್ನ ಬಗ್ಗೆ ನಿಮ್ಮ ಸ್ತುತಿವಾದನೆಯನ್ನು ಸಾಕುಮಾಡಿರಿ. ನನ್ನ ಸಮರವಿಜಯಕ್ಕಿಂತಲೂ ಸ್ವಾರಸ್ಯವಾದ ನನ್ನ ಮನೆಯ ಅವಾಂತರದ ಕತೆಯನ್ನು ನೀವು ಅರಿಯದೇ ಹೋದಿರಿ. ಯುದ್ಧದಲ್ಲಿ ನಾನು ಸತ್ತು ನಿಮ್ಮ ಮಗಳು—ನನ್ನ ಸತಿ—ನಂದಿನಿ ವಿಧವೆಯಾಗಿ ಮನೆಯ ಮುಟ್ಟುಗೋಲಾದ ಘಟನಾವಳಿಯನ್ನು ನಿಮಗೆ ನಾನು ವರದಿಮಾಡಿಕೊಂಡು ಹೋಗಲು ಬಂದೆನು." ಹೀಗೆಂದು ನುಡಿದು ನಂದಿನಿಯ ತಿಳಿಗೇಡಿತನದ ಕಥನವನ್ನು ಮಾವನಿಗೆ ನಂದನು ನಿರೂಪಿಸಿದನು.

ತರುವಾಯ ಅಲ್ಲಿ ಮತ್ತೆ ಅರೆಕ್ಷಣವೂ ನಿಲ್ಲದೆ ಮೇಲ್‌ಬಂಗಾಡಿ ಗುತ್ತಿನ ತನ್ನ ನಿವಾಸಕ್ಕೆ ಸಾಗಿದನು.

ಚಾವಡಿಯಲ್ಲಿ ಅವನಿಗೆ ನಂದಿನಿಯ ಮಂದಸ್ಮಿತ ಸುಂದರ ಮುಖಾರವಿಂದದ ದರ್ಶನವಾಯಿತು. ನಂದಿನಿ ಇದೀಗ ಅಜ್ಞಾನ ಕಳೆದ ನವನೂತನ ಸೌಭಾಗ್ಯವತಿಯಾಗಿದ್ದಳು. ಚಿಕ್ಕ ಮೇಘದಲ್ಲಿ ಸುಧಾಕರನ ಶುಭ್ರಕಾಂತಿಯು ಸಮಾಚ್ಛನ್ನವಾಗುವಂತೆ ನಂದನ ಅಶಾಂತಿ ತುಂಬಿದ ಹೃದಯದಲ್ಲಿ ಸ್ಫೂರ್ತಿಯು ಆಕ್ರಮಿಸಿಕೊಂಡಿತು. ಲಜ್ಜಾನ್ವಿತಳಾಗಿ ನಿಂತುಕೊಂಡ ತನ್ನ ಮನೋಹಾರಿಣಿಯ ಸುಕೋಮಲ ದೇಹವನ್ನು ಬರಸೆಳೆದು ಆಲಿಂಗಿಸಿದನು. ಹೃದಯಶುದ್ಧತೆಯ ಮಧ್ಯದಲ್ಲಿ ಮುಗ್ಧತನದ ಲೋಪದೋಷಗಳು ಕ್ಷಣಕಾಲ ಬಾಧಿಸಿದಾಗ್ಯೂ ನೈಜಸ್ಥಿತಿಯನ್ನು ಬಿಟ್ಟಗಲಲಾರದು.

—ಎಂ. ನಾರಾಯಣ,
ಮಂಗಳೂರು.

——

(ಮಕರ, ಮಾಘ—ಬಹುಳ)

| ತಾರೀಕು | ವಾರ | ತಿಥಿ ಸೌರ | ತಿಥಿ ಚಾಂದ್ರ | ನಿತ್ಯ ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ಮಹಾನಕ್ಷತ್ರ |
|---|---|---|---|---|---|---|---|---|---|
| | | | | | | | | | ಶತಭಿಷ |
| 25 | ರವಿ | ೧೩ | ಪಂ। | ಸ್ವಾ ೩೬। | ವೃ ೬।। | ತೈ । | ೫೧। | ೧೨। | ೨೬। |
| 26 | ಚಂದ್ರ | ೧೪ | ಷ ೩।।। | ವಿ ೪೦। | ಧ್ರು ೬।। | ವ ೩।।। | ೫೦।।। | ೧೬।।। | ೩೧।।। |
| 27 | ಕುಜ | ೧೫ | ಸ ೬ | ಅ ೪೨।।। | ವ್ಯಾ ೫। | ಬ ೬ | ೫೭ | ೧೫।।। | ೩೬। |
| 28 | ಬುಧ | ೧೬ | ಅ ೬। | ಜ್ಯೇ ೪೩।।। | ಹರ್ ೨।। ವ್ಯ ೫೬ | ಕೌ ೬। | ವಿಶೇ ೧ | ೨೧। | ೪೧ |
| 1 | ಗುರು | ೧೭ | ನ ೪।।। | ಮೂ ೪೨।। | ಸಿ ೫೩। | ಗ ೪।।। | ೩। | ೨೬।।। | ೬೫।। |
| 2 | ಶುಕ್ರ | ೧೮ | ದ ೧।। | ಪೂಷಾ ೩೯।।। | ವ್ಯ ೪೬। | ಭ ೧।। | ೫।।- | ೨೪। | ೫೦ |
| 3 | ಶನಿ | ೧೯ | ಉ್ಪ ೫೪।।। ದ್ವಾ ೪೯।। | ಉಷಾ ೩೫। | ವರಿ ೩೮ | ಕೌ ೨೨।। | ೫೮।। ವಿಶೆ ೨ ವಿ ೪೪। | ೨೦।। | ೫೪।। |

## ಈ ವಾರದ ಭವಿಷ್ಯ

ಶ್ರೀ ಎಮ್. ಸುಬ್ರಾಯನ್,
ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ.
ತಾರೀಕು ೨೫—೨—೧೯೬೨ರಿಂದ
ತಾ. ೩—೩—೧೯೬೨.

**ಮೇಷ:** ಜೀವನದಲ್ಲಿ ನವೀನತೆಗಿರುವ ಸಂಘಟನೆಯು ಕಂಡುಬರುವುದಾಗಿದೆ. ಸಂಪತ್ತಿನಿಂದ ಉನ್ನತಿಗಿರುವ ಸಂಪರ್ಕವು ಕಂಡುಬರುವುದು ದೊಡ್ಡ ಮನುಷ್ಯರ ಪ್ರೀತಿ ಸಹಾಯಗಳಿಗಿರುವ ಸಂಪರ್ಕವು ಸಂಭವಿಸುವುದಾಗಿದೆ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕರಾಗಿರಬೇಕು. ಪ್ರಯಾಣವನ್ನು ಮಾಡಲಿರುವಿರಿ.

**ವೃಷಭ:** ಹಲವಾರು ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ ಕರ್ಮದ ರವಿಯು ಯಶಸ್ಸು ಸ್ಥಾನಮಾನಗಳನ್ನು ಅಧಿಕರಿಸುವನು. ಕುಟುಂಬದ ವಾತಾವರಣವು ಉತ್ತಮವಾಗಿರುವುದಿಲ್ಲ ವ್ಯಾಪಾರಿಗಳು ಪ್ರಗತಿಯಿಂದ ಕೂಡಿದವರಾಗಿ ಕಾಣುವರು.

**ಮಿಥುನ:** ಆರ್ಥಿಕ ಸಮಸ್ಯೆಯಲ್ಲಿ ಶೊಡಕೂ ಹಿರಿಯರಿಂದ ಸುಖಾಭಾವವೂ ಈಗಣ ಗುರುವಿನಿಂದ ಮೊತ್ತಮೊದಲು ತೋರಲವಕಾಶವಿದೆ. ಬಂಧುಜನರ ವಿಯೋಗವನ್ನು ಹೊಂದಲಿರುವಿರಿ ವಿದ್ಯಾಜೀವನದವರು ಅಭಿವೃದ್ಧಿಯುಳ್ಳವರಾಗುವರು.

**ಕರ್ಕಟಕ:** ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುವುದು. ಆಕಸ್ಮಿಕ ಘಟನೆಗಳು ಸಂಭವಿಸುವವು. ವ್ಯಾಪಾರಿಗಳು ಅಭಿವೃದ್ಧಿಯ ಮಾರ್ಗವನ್ನು ಅವಲಂಬಿಸುವರು. ಶುಭಕೆಲಸಗಳಿಗಾಗಿ ಧನವ್ಯಯವಾಗಲಿರುತ್ತದೆ.

**ಸಿಂಹ:** ಸಾಮೂದಾಯಿಕ ಜೀವನದಲ್ಲಿ ಅಭಿವೃದ್ಧಿಗಿರುವ ಸಂಪರ್ಕವಾಗುವುದು. ಮಾನಸಿಕ ಶಾಂತಿಯು ಕಡಮೆಯಾಗಿರುವುದು. ರಿಕಾರ್ಡು ವ್ಯವಹಾರಗಳಲ್ಲಿ ಜಯವಾಗಲಿರುತ್ತದೆ. ವಿದ್ಯಾಜೀವನದವರು ಪ್ರಗತಿಯಿಂದ ಕೂಡಿದವರಾಗುವರು, ನೌಕರರಿಗೆ ಪ್ರಗತಿದಾಯಕ.

**ಕನ್ಯಾ:** ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುವುದು. ಶತ್ರುಗಳನ್ನು ಜಯಿಸಲಿರುವಿರಿ. ಹಿರಿಯರ ಆರೋಗ್ಯದ ನೆಲೆಯು ಉತ್ತಮವಾಗಿರದು. ಬಂಧುಜನರ ಅಗಲುವಿಕೆಯನ್ನು ಸಂಭವಿಸುವುದಾಗಿದೆ. ಚಿತ್ರಾನಕ್ಷತ್ರದವರು ಉನ್ನತಿಯುಳ್ಳವರಾಗುವರು.

**ತುಲಾ:** ಹಲವಾರು ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ ಸಂಪತ್ತಿನಿಂದ ಉನ್ನತಿಯನ್ನು ಹೊಂದಲಿರುವ ಯೋಗವಿರುತ್ತದೆ. ತರುಣ ತರುಣಿಯರಿಗೆ ದಾಂಪತ್ಯ ಜೀವನಕ್ಕಿರುವ ಸಂಪರ್ಕವಿದೆ.

**ವೃಶ್ಚಿಕ:** ಹೊಸ ಕೆಲಸಗಳಿಗೆ ಕೈಯನ್ನು ನೀಡಿದವರಾಗುವಿರಿ. ಸಂಪತ್ತಿನ ಅಭಿವೃದ್ಧಿಯಾಗಲಿರುತ್ತದೆ. ಮನೆಯ ವಾತಾವರಣ ಚೆನ್ನಾಗಿರುವುದಿಲ್ಲ. ವಿದ್ಯಾಜೀವನದವರು ಅಭಿವೃದ್ಧಿಯುಳ್ಳವರಾಗುವರು. ಪ್ರಯಾಣವನ್ನು ಮಾಡಲಿರುವ ಯೋಗವಿರುತ್ತದೆ.

**ಧನು:** ಕಲಸಗಳೆಲ್ಲಾ ಹಿಂದುಮುಂದಾಗುವವು. ಬಂಧುವರ್ಗದ ಸಹಾಯವನ್ನು ಕರ್ಮದಲ್ಲಿ ಹೊಂದುವಿರಿ. ಇದರಿಂದ ಸಂಪತ್ತಿನ ಉನ್ನತಿಗಿರುವ ಅವಕಾಶವಾಗುತ್ತದೆ. ಸಂತಾನವೃದ್ಧಿಗಿರುವ ಸಂಪರ್ಕವಿರುತ್ತದೆ. ಮೂಲಾನಕ್ಷತ್ರದವರು ಅಭಿವೃದ್ಧಿಗೊಳ್ಳುವರು.

**ಮಕರ:** ಸಂಪತ್ತಿನ ನೆಲೆಯಿಂದ ಉನ್ನತಿಗೆ ಅವಕಾಶವಾಗುತ್ತಿದೆಯಾದರೂ ಕುಟುಂಬದ ನೆಲೆ ಚೆನ್ನಾಗಿರದು. ಬಂಧುಜನರ ಅಗಲುವಿಕೆಯನ್ನು ಹೊಂದಲಿರುವಿರಿ. ಕೋರ್ಟು ವ್ಯವಹಾರಗಳು ಮುಂದುವರಿಯುವವು ದೇಹಾರೋಗ್ಯದ ವಿಷಯದಲ್ಲಿ ಜಾಗರೂಕತೆಯುಳ್ಳವರಾಗಬೇಕು.

**ಕುಂಭ:** ಕೆಲಸಗಳೆಲ್ಲಾ ಸಾವಕಾಶವಾಗಿಯೇ ಕೊನೆಗೊಳ್ಳುವವು. ದೊಡ್ಡ ಮನುಷ್ಯರ ಭೇಟಿ ಸಹಾಯಗಳು ಸಿದ್ಧಿಸಲಿರುತ್ತವೆ. ವಾಗ್ವಾದಗಳುಂಟಾಗದಂತೆ ಜಾಗರೂಕರಾಗಿರಬೇಕು. ಪತನವ್ರಣ ಅವಘಡಗಳಾಗದಂತೆ ಜಾಗರೂಕರಾಗಿರಬೇಕು.

**ಮೀನ:** ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ಸಮಯಾವಕಾಶ ಕಡಮೆಯಾಗಿರುತ್ತದೆ. ದೇಹಾರೋಗ್ಯದ ವಿಚಾರದಲ್ಲಿ ಜಾಗರೂಕತೆಯುಳ್ಳವರಾಗಿರಿ. ವಿದ್ಯಾರ್ಥಿಗಳು ಪ್ರಗತಿಯನ್ನು ಹೊಂದಲಿರುವ ಯೋಗಯುಕ್ತರಾಗುವರು. ಪ್ರಯಾಣವಿದೆ.

---

### ಬೆಸ್ತರಿಗೆ ಸಹಾಯಧನ

ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಿಗೆ ಸಹಾಯ ನೀಡಲು ಮೈಸೂರು ಸರಕಾರ ರೂ. 350,000 ಮಂಜೂರು ಮಾಡಿರುವುದಾಗಿ ತಿಳಿಯಲಾಗಿದೆ.










Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy




### ಮಹಾಸಭೆ

ಕರ್ನಾಟಕ ಮತ್ತು ಕೇರಳ ಪ್ರಾಂತೀಯ ಗ್ರಾಮ ವೈದ್ಯ ಸಂಘದ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಮಂಗಳೂರಲ್ಲಿ ನಗರಸಭಾ ಸದಸ್ಯ ಶ್ರೀ| ವಾಮನ ಕೊಡಿಯಾಲಬೈಲ್‌ರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಹೊಸ ವರ್ಷಕ್ಕೆ ಈ ಕೆಳಗಿನ ಕಾರ್ಯಕಾರಿ ಸಮಿತಿಯು ಆರಿಸಲ್ಪಟ್ಟಿತು: ಶ್ರೀ|ಗಳಾದ ವಾಮನ ಕೊಡಿಯಾಲಬೈಲ್—ಅಧ್ಯಕ್ಷ, ಪಿ. ಯಲ್. ಮಂಜರ್—ಉಪಾಧ್ಯಕ್ಷ, ಎಂ. ಶಂಕರ್ ಮತ್ತು ಡಾ| ಕೆ. ಅಚ್ಯುತ ಶೆಣೈ—ಜೊತೆ ಕಾರ್ಯದರ್ಶಿಗಳು, ಯು. ಟಿ ಪಂಡಿತ್—ಕೋಶಾಧ್ಯಕ್ಷ, ಪಿ. ಕೆ. ವೆಂಕಟ್ರಮಣ ಭಟ್, ಯಸ್. ಡಿ. ಸುವರ್ಣ, ಟಿ. ಆರ್. ಶರ್ಮಾ, ಐ. ವೆಂಕಟ್ರಮಣ ರಾವ್, ಬಾಲಕೃಷ್ಣ ಮುದ್ಯ, ಕೆ. ಶಂಕರ್, ಕೃಷ್ಣ ಕಿಣಿ ಮತ್ತು ಯು. ವಿ. ಕೃಷ್ಣ—ಸದಸ್ಯರುಗಳು.

### ಆಯುರ್ವೇದ ಪರಿಷತ್ತು

ಆಯುರ್ವೇದ ಮತ್ತು ಮಿಶ್ರ ಆಯುರ್ವೇದ ಪದ್ಧತಿಯ ವೈದ್ಯರುಗಳ ಪರಿಷತ್ತು ಇತ್ತೀಚೆಗೆ ಅಪರಾಹ್ನ ಮಂಗಳೂರಲ್ಲಿ ಅಖಿಲ ಕರ್ನಾಟಕ ಆಯುರ್ವೇದ ಮಂಡಳದ ಅಧ್ಯಕ್ಷ ಹಾಗು ಬೆಳಗಾವ್ ಆಯುರ್ವೇದ ಕೊಲೆಜಿನ ಪ್ರಿನ್ಸಿಪಾಲ್ ಡಾ| ಎ. ವಿ. ಗದಗ್‌ರವರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿತ್ತು. ಮೈಸೂರು ಆಯುರ್ವೇದಿಕ್ ಕೊಲೇಜ್ ವಿದ್ಯಾರ್ಥಿಗಳ ಮುಷ್ಕರಕ್ಕೆ ಬೆಂಬಲ ಸೂಚಿಸುವ, ತರಬೇತಿ ಹೊಂದಿದ ಗ್ರಾಮ ವೈದ್ಯರುಗಳನ್ನು ಮಿಶ್ರ ಪದ್ಧತಿಯ ಚಿಕಿತ್ಸಕರೆಂದು 'ಮೈಸೂರು ಮೆಡಿಕಲ್ ಪ್ರೆಕ್ಟಿಶನರ್' ಎಕ್ಟಿನಲ್ಲಿ ಕೂಡಲೇ ಪರಿಗಣಿಸಲ್ಪಟ್ಟು ಅನುಬಂಧದಲ್ಲಿ ಅವರ 'ಪರೀಕ್ಷಾನಾಮ' ಸೇರಿಸಲ್ಪಡಬೇಕೆನ್ನುವ, ಸಧ್ಯದಲ್ಲೇ ನೇಮಿಸಲ್ಪಡುವ 'ಆಯುರ್ವೇದ ಬೋರ್ಡಿ'ನಲ್ಲಿ ಸರಕಾರೀ ತರಬೇತಿ ಹೊಂದಿದ್ದ ಗ್ರಾಮ ವೈದ್ಯರ ಸಂಘಕ್ಕೆ ಒಂದು ಪ್ರಾತಿನಿಧ್ಯ ಕೊಡಬೇಕೆನ್ನುವ ಗೊತ್ತುವಳಿಗಳು ಪರಿಷತ್ತಿನಲ್ಲಿ ಕೈಕೊಳ್ಳಲ್ಪಟ್ಟವು.

### ಸಂಗೀತ ಕಚೇರಿ

ಪಾಕಿಸ್ತಾನೀ ಸಹೋದರರೆಂದು ಪ್ರಸಿದ್ಧಿ ಹೊಂದಿದ ಉಸ್ತಾದ್ ನಜಾಕತ್ ಅಲೀಖಾನ್ ಮತ್ತು ಉಸ್ತಾದ್ ಸಲಾಮತ್ ಅಲೀಖಾನ್ ಇವರ ಶಾಸ್ತ್ರೀಯ ಸಂಗೀತ ಕಚೇರಿಯು ಮಂಗಳೂರಿನ ಸಂಗೀತ ಕಲಾ ಪ್ರಸಾರಕ ಸಂಘದ ಆಶ್ರಯದಲ್ಲಿ ಕಳೆದ ತಾ. 17ರಂದು ರಾತ್ರಿ 9-30 ಗಂಟೆಗೆ ಸೆಂಟ್ರಲ್ ವಾರ್ಡ್ ಮುನ್ಸಿಪಾಲ್ ಹಾ| ಎ| ಶಾಲೆಯ ಕಲಾ ಮಂಟಪದಲ್ಲಿ ಕಿಕ್ಕಿರಿದ ಶ್ರೋತೃವೃಂದದ ಮುಂದೆ ಯಶಸ್ವಿಯಾಗಿ ಜರಗಿತು. ಅಲೀ ಸಹೋದರರು 'ಮಧುವಂತಿ' ರಾಗದಿಂದ ಕಚೇರಿ ಆರಂಭಿಸಿ, ಸುಮಾರು ಒಂದೂವರೆ ತಾಸು ಆ ರಾಗ ಹಾಡಿಯಾದ ಮೇಲೆ ದರ್ಬಾರಿ ರಾಗವನ್ನು ವೈವಿಧ್ಯಪೂರ್ಣವಾಗಿ ಒಂದೂ ಮುಕ್ಕಾಲು ತಾಸು ಹಾಡಿ, ಭೈರವಿ ರಾಗದಲ್ಲಿ ಠುಮ್ರಿ ಹಾಡಿ ತಮ್ಮ ಕಾರ್ಯಕ್ರಮ ಮುಕ್ತಾಯಗೊಳಿಸಿದರು. ಹಿನ್ನೆಲೆಯಲ್ಲಿ ಅವರಿಗೆ ಸಾಥಿಯಾಗಿ ಅಖಿಲ ಭಾರತ ಖ್ಯಾತಿಯ ಶ್ರೀ| ರಾಮ್ ನಾರಾಯಣ್ (ಸಾರಂಗಿ) ಮತ್ತು ಅಲ್ಲಾರಖಾ (ತಬ್ಲಾ) ಇವರು ಅತ್ಯುತ್ತಮ ಹಿನ್ನೆಲೆ ಒದಗಿಸಿದ್ದರು. ಸಂಗೀತ ಕಲಾ ಪ್ರಸಾರಕ ಸಂಘದ ಅಧ್ಯಕ್ಷ ಶ್ರೀ| ಎಸ್. ಎನ್. ಕಿಣಿಯವರು ಆರಂಭದಲ್ಲಿ ಸ್ವಾಗತಿಸಿ ಕಲಾವಿದರ ಪರಿಚಯ ಮಾಡಿಕೊಟ್ಟರು. ವಿರಾಮ ಕಾಲದಲ್ಲಿ ಸಂಗೀತ ಕಚೇರಿಗೆ ಮುಖ್ಯ ಅತಿಥಿಯಾಗಿ ಹಾಜರಿದ್ದ ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶ ಶ್ರೀ| ವಿ. ಸಿ. ರಾಮಚಂದ್ರನ್‌ರವರು ಕಲಾವಿದರ ಅಸಾಧಾರಣ ಪ್ರೌಢಿಮೆಯನ್ನು ಶ್ಲಾಘಿಸಿ ಭಾಷಣಮಾಡಿದ್ದರು.

### ರೆಡಿಯೋ ಸ್ಪರ್ಧೆಯಲ್ಲಿ ಬಹುಮಾನ

ಬೆಂಗಳೂರು ಆಕಾಶವಾಣಿ ಕೇಂದ್ರದವರು ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಕನ್ನಡ 'ಸಂವಾದ ರಚನೆ'ಯ ಸ್ಪರ್ಧೆಯಲ್ಲಿ ಮೂಲ್ಕಿಯ ಮೆಡಲೀನ್ ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ ಎಂ. ಲೀಲಾಬಾಯಿ ದ್ವಿತೀಯ ಬಹುಮಾನ ಪಡೆದಿರುವರು. ಅವರ ಕೃತಿಯನ್ನು ತಾ. 22ರಂದು ಅಪರಾಹ್ನ 3 ರಿಂದ 3-30ರ ವರೆಗಿನ ಕಾರ್ಯಕ್ರಮದಲ್ಲಿ ಬಿತ್ತರಿಸಲಾಗಿತ್ತು.

——



Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy.